
ಕೊರವಂಜಿ

Koravanji



ಜನವರಿ

೧೯೫೭

★

ಸಂಪಾದಕರು :

ಶ್ರೀ|| ರಾ. ಶಿ.

ಬರಹಗಾರರು :

ಶ್ರೀ|| ಹಾ. ರಾ.
ಶ್ರೀ|| ರಾಮಿ
ಶ್ರೀ|| ದಾಶರಥಿ ದೀಕ್ಷಿತ್
ಶ್ರೀ|| ಕಾಮತ್
ಶ್ರೀ|| ಖಾರಾಂತ
ಶ್ರೀ|| ಪಾಟಾಳಿ
ಶ್ರೀ|| "ಕೇಫ"
ಶ್ರೀ|| ನಾ. ಕ.
ಶ್ರೀ|| ಅ. ರಾ. ಸೇ.
ಶ್ರೀ|| ಪ್ರಕಾಶ್


ಇತ್ಯಾದಿ, ಇತ್ಯಾದಿ.

ತಿಳಿನಗೆಯ ಮಾಸಪತ್ರಿಕೆ

ಬಿಡಿ ಪ್ರತಿ

ಜಾಗ್ರತೆಯಾಗಿ ತೆರೆಗೆ ಬರುವುದು

ಏಕನಾಥ ಉಘೇ ಜೋಗಿನಾಥ ಉಘೇ



ರೋಹಿಣಿ ಪ್ರೊಡಕ್ಷನ್ಸ್‌ರವರ ಪೌರಾಣಿಕ ಕನ್ನಡ ಚಿತ್ರ

ರೇಣುಕಾ ಮಹಾತ್ಮೆ

—(ಎಲ್ಲಮ್ಮ)—

ನಿರ್ಮಾತೃ: **ಹೆಚ್. ಎಂ. ರೆಡ್ಡಿ**

ನಿರ್ದೇಶಕ: **ವೈ. ಆರ್. ಸ್ವಾಮಿ, ಎಂ.ಎ.,**

ಕಥೆ, ಸಂಭಾಷಣೆ ಮತ್ತು ಗೀತೆಗಳು:


ಹುಣಸೂರು ಕೃಷ್ಣಮೂರ್ತಿ

ನಾಗೇಂದ್ರರಾವ್ — ಪಂಡರೀಬಾಯಿ — ಗಿರಿಮಾಜಿ — ರಾಜನಾಲ
ನರಸಿಂಹರಾಜು — ಲಕ್ಷ್ಮೀದೇವಿ — ಮಧು — ಉಮಾ ಅಭಿನಯ.

ಮೈಸೂರು ಸಂಸ್ಥಾನದ ಹಂಚಿಕೆಗಾರರು:
ರಾಘವೇಂದ್ರ ಪಿಕ್ಚರ್ಸ್, ಬೆಂಗಳೂರು-೨.

ಬೊಂಬಾಯಿ ಪ್ರಾಂತ್ಯದ ಹಂಚಿಕೆಗಾರರು:
ಶ್ರೀನಿವಾಸ ಪಿಕ್ಚರ್ಸ್, ಗದಗ.

ಕಟಕ


...ಹೌದು,ರಾಯರೇ ಬ್ರಷ್ಷಿನಿಂದ ಬಳಿಯಬಹುದು, ಸ್ಪ್ರೇ ಮಾಡಬಹುದು,ಅಥವಾ ಬಣ್ಣದಲ್ಲಿ ಅದ್ದಲೂಬಹುದು...
...ನಿಜವಾಗಿಯೂ, ಗಟ್ಟಿಯಾಗಿ ಬೇಗನೆ ಒಣಗುತ್ತದೆ...
...ಹೊಳಪಿನಿಂದಕೂಡಿ ಬಹುಕಾಲ ಬಾಳಿಕೆ ಬರುತ್ತದೆ...
ಸರಿ, ಯಂತ್ರಗಳ ಮೇಲೂ,ಆಫೀಸು ಸಾಮಾನುಗಳಮೇಲೂ...
...ಬೇಕಾದಲ್ಲಿ ಗೋಡೆಗಳಮೇಲೂ...
..ನಿಸ್ಸಂದೇಹವಾಗಿ ಸಕಲ ಕಾರ್ಯಗಳಿಗೂ ಉಪಯೋಗ ವಾಗಬಲ್ಲದು...
. ಎಲ್ಲೈ ಮಿತ್ರರೇ ಹೇಳಿ,ಇದು ಯಾವ ಬಣ್ಣ?...
...ನಾನು ಬಲ್ಲೆ! ಇವೆಲ್ಲಾ ಗುಣಗಳಿಂದ ಕೂಡಿರುವ ಬಣ್ಣವೇ ಅತ್ಯುತ್ತಮವಾದ
ಶಾಲಿಮಾರ್
ಸಿಂಥೆಟಿಕ್ ಎನಾಮೆಲ್
SPW 261

ಶೀಘ್ರದಲ್ಲಿಯೇ ಬರಲಿದೆ!



ಅರುಣಾ ಫಿಲ್ಮ್ಸ್‌ರವರ—

ಡಾಕ್ಟರ್ ಸಾವಿತ್ರಿ

—(ತಮಿಳು)—

ಅಂಜಲಿ ದೇವಿ - ಎಂ. ಎನ್. ರಾಜಂ - ಎಸ್. ಬಾಲಚಂದರ್
ನಂಬಿಯಾರ್ - ಬಿ. ಆರ್. ಪಂತುಲು - ಎನ್. ಎಸ್. ಕೃಷ್ಣನ್
ಟಿ. ಎ. ಮಧುರಂ.

ನಿರ್ದೇಶನ:
ಆರ್. ಎಂ. ಕೃಷ್ಣಸ್ವಾಮಿ

A VIJAYA TALKIE RELEASE

ಕೊರವಂಜಿ

A. ANANTHIAH

ಸಂಪುಟ ೧೫ | ಜನವರಿ ೧೯೫೬ | ಸಂಚಿಕೆ ೧೦

★ “ಶ್ರೀರಂಗ”ರಿಗೆ ನಮಸ್ತೆ! ★

ಕೊರವಂಜಿಯ ಜನ್ಮಕ್ಕೆ ಜ್ಞಾನದಾತರಾದ ಕೀರ್ತಿಶೇಷ ಕೈಲಾಸಂರವರು ಕನ್ನಡನಾಡಿನಲ್ಲಿ ಆಂದೋಳನವನ್ನು ಎಬ್ಬಿಸಿದ ಪರ್ವಕಾಲದಲ್ಲಿ ಶ್ರೀ ಆ್ಹರ್. ವಿ. ಜಾಗೀರದಾರರೆಂಬೊಬ್ಬ ಅವರ ಮಿತ್ರರು ಉತ್ತರ ಕರ್ಣಾಟಕದಲ್ಲಿ ನಾಟಕ ಸಾಹಿತ್ಯ ದಲ್ಲಿ ಆಂದೋಳನವನ್ನು ಮಾಡತೊಡಗಿದ್ದರು.

ಆಗ್ಗೆ, ಸುಮಾರು ೩೫ ವರ್ಷಗಳ ಹಿಂದಿನಲ್ಲಿ ಬೇಂದ್ರೆ, ಗೋಕಾಕ್ ಜಾಗೀರ್ ದಾರ್ ಎಂಬ ತ್ರಿಮೂರ್ತಿಗಳು ನಮ್ಮ ಕಡೆಯ ಕರ್ನಾಟಕದಲ್ಲಿ ಪುಳಕು ಗೊಳಿಸು ತ್ತಿದ್ದರು. ಅಲ್ಲಿಂದಿಲ್ಲಿನತನಕ ಹೆಸರು ಬದಲಾಯಿಸಿಕೊಂಡರೂ ಆದ್ಯ ಅವರೇ ಆಗಿದ್ದಾರೆ. ರಂಗಮಂಟಪಕ್ಕೆ ಶ್ರೀಯನ್ನು ತುಂಬಿದ್ದಾರೆ ಶ್ರೀರಂಗರೆಂದು ಪ್ರಖ್ಯಾತಿ ಪಡೆದಿದ್ದಾರೆ. ಚುಚ್ಚಿ ನಗಿಸುವ, ತಿಳಿದು ನಗುವಂತೆ ಮಾಡುವ ಕೈ ಅವರದ್ದೇ ಆಗಿದೆ.

ಕೊರವಂಜಿಯ ಧ್ಯೇಯವೂ ಅದೇ ತೆರನಾದುದಲ್ಲವೇ? ಆ ಕಾರಣದಿಂದಲೇ ಈಗ ಕನ್ನಡ ಸಾಹಿತ್ಯ ಪರಿಷತ್ತಿನ ರಾಯಚೂರು ಅಧಿವೇಶನಕ್ಕೆ ಶ್ರೀಯುತ 'ಶ್ರೀರಂಗ'ರು ಅಧ್ಯಕ್ಷರಾಗಿರುವುದು,ನಮಗೇ ಪುಕ್ಕ ರಕ್ಕೆ ಬಂದಂತಾಗಿದೆ. ಅವರಿಗಿಂತ ಹೆಚ್ಚಾಗಿ ನಮಗೆ ಸಂತೋಷವಾಗಿದೆ.

ಈ ರೀತಿ ಸಂತಸಗೊಂಡ ಕೊರವಂಜಿಯು ಶ್ರೀಯುತ ಆದ್ಯ ರಂಗಾಚಾರ್ಯರಿಗೆ ಅಭಿನಂದನೆಗಳನ್ನು ಆದರಪೂರ್ವಕ ಸಲ್ಲಿಸುತ್ತಾಳೆ.

—o—

ಕುಹಕಿಡಿಗಳು

"ಕ್ರುಶ್ಚೆವ್ ಸಾಲ್ಟ್ಸ್" ನುಂಗಿದ ಶ್ರೀ ಡಲ್ಲೆಸ್‌ರವರು, ಹಾಗಾಡುವುದು ನ್ಯಾಯವೇ ಅಲ್ಲವೇ?

* * *

ಅ. ಭಾ. ಸಮಾಜ ಕರ್ತೃಗಳ ಸಭೆಯ ಸುಧಾರಣೆಗಾಗಿ ಬೇರೊಂದು ಉಪಸಭೆಯನ್ನು ಮಾನ್ಯ ಶ್ರೀಮತಿ ಅಮೃತಕೌರರ ಅಧ್ಯಕ್ಷತೆಯಲ್ಲಿ ಏರ್ಪಾಡಿಸುತ್ತಾರೆಂಬುದು ಶುದ್ಧ ಸುಳ್ಳಂತೆ.

* * *

ಗಂಡ–ಮಿಂಡರ ಜಗಳದಲ್ಲಿ, ಮಾಂಗೋಲಿಯಾ ಜಪಾನ್ ಬಡವಾದುವಂತೆ.

* * *

ಮಲಯಾಳದ ಸ್ತ್ರೀಸ್ವಾತಂತ್ರ್ಯವನ್ನು ಕಂಡು ನೆಹ್ರೂ ಮೆಚ್ಚಿದರಂತೆ.

—ಮೆಚ್ಚದೇ ಏನು? ಅವರಾಕೆಯನ್ನು ಮದುವೆಯಾಗಿದ್ದಿದ್ದರೆ ಆಗ ಬೇರೆ ಅಭಿಪ್ರಾಯ ಬರುತ್ತಿತ್ತೇನೋ?

* * *

ರಷ್ಯಾನಾಯಕರು ಇಂಗ್ಲೆಂಡಿಗೆ ಮುಂದಿನ ಬೇಸಿಗೆಯಲ್ಲಿ ಭೇಟಿ ಇತ್ತಾಗ ಹಿಟ್ಲರನ ಪ್ರಗತಿಗೆ ಅಮೆರಿಕನ್ನರೇ ಕಾರಣ ಎಂದು ಪ್ರತಿಪಾದಿಸುತ್ತಾರೆಂಬುದು ಶುದ್ಧ ಕುಹಕ.

* * *

ಹೆರಳು ಕಂಡ ತಾರೆ ಹಗಲಲ್ಲೇ ಭಾವಿಗೆ ಬಿದ್ದಳಂತೆ.

* * *

ಬೊಂಬಾಯಿ ನಗರವು ಮಹಾರಾಷ್ಟ್ರಕ್ಕೇ ಸೇರಬೇಕು ಎಂದು ಮಹಾತ್ಮಾಜಿಯವರು ಹೇಳಿದ್ದರು ಎಂದು ಶಂಕರರಾವ್‌ದೇವ್‌ರವರು ಇನ್ನೂ ಹೇಳಿಲ್ಲವಂತೆ.

—ಹಾಗೂ ಗುಜರಾತಿಗೆ ಸೇರಬೇಕು ಎಂದು ಹೇಳಿದ್ದರು ಎಂದು ಮೊರಾರ್ಜಿಯವರೂ ಇನ್ನೂ ಹೇಳಿಲ್ಲವಂತೆ.

* * *

ಉರಿಗಾಳು

ನಂದಿ ಬೆಟ್ಟದಲ್ಲಿರುವ "ಟಿಪ್ಪೂಸ್ ಫಾಲ್"ನ್ನು ನೋಡಿದಾಗ, ಅಮೇರಿಕನ್ ಪ್ರವಾಸಿ ಒಬ್ಬರು, "ಇಷ್ಟು ಆಳ ಬಿದ್ದ ಮೇಲೆ, ಆತ ಸತ್ತದ್ದೇನಾಶ್ಚರ್ಯ?" ಎಂದನಂತೆ,

* * *

ಅಡಿಕೆಮರ ಹತ್ತುವುದನ್ನು ನೋಡಿ ಚಕಿತರಾದ ಬುಲ್ಗಾನಿನ್‌ರವರು, ಯಾರಯ್ಯಾ ನಿನಗಿದನ್ನು ಕಲಿಸಿದವರು, ಎಂದು ಆತನನ್ನು ಕೇಳಿದಾಗ, ಆತ, "ನಮ್ಮ ತಾತ ಮುತ್ತಾತಂದಿರ ಕಾಲದಿಂದಲೂ, ಇದೇ ಅಭ್ಯಾಸ" ಎಂದು ಉತ್ತರ ಹೇಳಿದನಂತೆ....ಜೀವಶಾಸ್ತ್ರವನ್ನು ಬಲ್ಲವ ಆತ.

* * *

ರಷ್ಯಾದಿಂದ ಹಿಂತಿರುಗಿದಾಗ "ನನ್ನ ಹೃದಯದ ಒಂದು ಚೂರು ಇಲ್ಲೇ ಇರುತ್ತದೆ" ಎಂದರು ನೆಹರು; ಭಾರತದಿಂದ ಹಿಂತಿರುಗಿದಾಗ "ನನ್ನ ಹೃದಯದ ಒಂದು ಚೂರು ಇಲ್ಲೇ ಇರುತ್ತದೆ" ಎಂದರು ಬುಲ್ಗಾನಿನ್; ಇದನ್ನು ಕೇಳಿ, ಡಲ್ಲೆಸ್‌ರ ಎದೆ ಚೂರು ಚೂರಾಯಿತು.

* * *

ಲೋಕ ಸಭಾಸದಸ್ಯರ ಪೈಕಿ ಅನೇಕರು ಸಭೆಯಲ್ಲಿ ಹಾಜರಿರುವುದೇ ಇಲ್ಲ; ಸುಮ್ಮನೆ ಡಿಲ್ಲಿಯಲ್ಲಿ ಸುತ್ತಾಡುತ್ತಾ ಕಾಲಹರಣ ಮಾಡುತ್ತಿರುತ್ತಾರೆ, ಎಂಬ ದೂರು ಎದ್ದಿದೆ....ಆ ರೀತಿ ಮಾಡುವುದೇ ಅವರ ದೇಶ ಸೇವೆ.

* * *

ಚೈನಾ ದೇಶದ ಉಪಾಧ್ಯಕ್ಷಿಣಿ ಮೊನ್ನೆ ಡಿಲ್ಲಿಗೆ ಬಂದಾಗಲೂ, ಜನ "ಭಾಯಿ, ಭಾಯಿ" ಎಂದು ಕೂಗಿದರಂತೆ....ಅಭ್ಯಾಸ ಬಲ ವ್ಯಾಕರಣವನ್ನೂ ಕೆಡಿಸುತ್ತದೆ.

* * *

ಸೌರಾಷ್ಟ್ರದ ರಾಜಪ್ರಮುಖರಾಗಿರುವ ನವನಗರದ ಜಂ ಸಾಹೇಬರು, "ಮುಂದೆ ಯಾವುದಾದರೂ ನೌಕರಿಯನ್ನು ಸ್ವೀಕರಿಸುವಿರಾ?" ಎಂಬ ಪ್ರಶ್ನೆಗೆ, ಮೂರು ವರ್ಷದಲ್ಲಿ ಮುಗಿಯುವ, ಮೂರು ವಾರಕ್ಕೇ ಮುಕ್ತಾಯಗೊಳ್ಳುವ ಯಾವ ನೌಕರಿಯೂ ನನಗೆ ಬೇಡ" ಎಂದರಂತೆ ...ಅವರನ್ನು ಕೇಳುವುದಕ್ಕಿಂತ 'ಪ್ರಶ್ನೆ ಕೇಳುವುದು' ಒಳ್ಳೆಯದು.

ಪೆನಿಸಿಲಿನ್‌ಗಿಂತ ಸ್ಟ್ರೆಪ್ಟೊಮೈಸಿನ್‌ಗಿಂತ ತೀವ್ರ ಫಲಕಾರಿಯಾದ ಒಂದು ಚಿಕಿತ್ಸಾವಿಧಾನವನ್ನು ರಷ್ಯನರು ಕಂಡುಹಿಡಿದಿದಾರಂತೆ........ಗಾಂಧಿಟೋಪಿ ಧರಿಸಿ, ನಮಸ್ತೆ ಅಂತ ಕೈಮುಗಿದರಾಯಿತು, ರೋಗ ವಾಸಿ.

* * *

ಆಂಧ್ರರಾಜ್ಯದಲ್ಲಿ ಕಳೆದವರ್ಷ ಪೋಲೀಸ್ ಕಾನ್‌ಸ್ಟಬಲ್‌ಗಳಿಗಾಗಿಯೇ ೬೭೭೩ ಮನೆಗಳನ್ನು ಸರ್ಕಾರದವರು ಕಟ್ಟಿಸಿದರಂತೆ....ಇದರಿಂದ, ಒಂದು ಅನುಕೂಲ; ಪೋಲೀಸಿನವರು ಇತರರ ಮನೆಗಳಿಗೆ ನುಗ್ಗುವುದು ಕಡಮೆಯಾಗುತ್ತದೆ.

* * *

ಮದ್ರಾಸ್ ನಗರದ ಬಸ್ಸುಗಳಲ್ಲಿ ಜನವರಿ ಒಂದರಿಂದ, ಸುಂದರವಾಗಿ ಎರಡು ಬಣ್ಣ ಬಳಿದು ಅಚ್ಚುಮಾಡಿದ ಹೊಸ ಟಿಕೀಟುಗಳನ್ನು ಪ್ರಯಾಣಿಕರಿಗೆ ಕೊಡಲಾಗುವುದಂತೆ....ಕೊಡುವ ಕಾಸಿಗೆ ಅಷ್ಟಾದರೂ ಪ್ರತಿಫಲ ದೊರಕುತ್ತದಲ್ಲಾ, ಅಲ್ಲಿ.... ಬೆಂಗಳೂರಲ್ಲಿ, ಅದೂ ಇಲ್ಲ.

* * *

ಬೆಂಗಳೂರು ಸೆಂಟ್ರಲ್ ಜೈಲಿನ ಒಂದು ಭಾಗವನ್ನು "ಗೃಹ ವಿಜ್ಞಾನದ ಮಹಿಳಾ ಕಾಲೇಜಿಗೆ" ಕೊಡಲಾಗಿದೆ.. ....ಗೃಹಿಣಿಯರಿಗೂ ಕಾರಾಗೃಹಕ್ಕೂ ಲಾಗಾಯ್ತಿನಿಂದ ಸಂಬಂಧ ಇದ್ದೇ ಇದೆ, ಎಂಬ ಕಾರಣದಿಂದಿರಬೇಕು.

* * *

ಯೂರೋಪ್‌ನಲ್ಲೆಲ್ಲ ಲಾಭದಾಸೆಯಿಂದ ಯಾವ ಸಂಗೀತ ಸಭೆಯೂ ನಡೆಸುತ್ತಿಲ್ಲ (ಸರ್ ಸ್ಟೂವರ್ಟ್ ವಿಲ್‌ಸ್ರ್) ಭಾರತದಲ್ಲಿ ಹಾಗಲ್ಲ; ನಷ್ಟದ ಭಯ ಇದ್ದೇಯಿದೆ.

* * *

ಸಲಹೆ ಕೊಡುವ ಚಟ ಇರುವವರಿಗೆ ನಮ್ಮದೊಂದು ಸಲಹೆ:....ಕೊಡಬೇಡಿ.

* * *

ಪ್ರಪಂಚದ ರಾಜಕೀಯ ಹರಾಜಿನ ಕೂಗುಗಳು.

— ಗೋವಾ ಭಾರತಕ್ಕೆ ಸೇರಿದ್ದು
ಒಂದುಸಲ, ಎರಡುಸಲ:— ಕ್ರುಶ್ಚೆವ್.

— ಗೋವಾ ಪೋರ್ಚುಗಲ್ಲಿನ ಪ್ರಾಂತ್ಯ.
ಒಂದುಸಲ, ಎರಡುಸಲ:— ಡಲ್ಲೆಸ್.

— ಕಾಶ್ಮೀರಕ್ಕೆ ನೀವು ಕಾಲಿಡಬೇಡಿ
ಒಂದುಸಲ, ಎರಡುಸಲ:— ಪಾಕೀಸ್ತಾನ್.

— ಕಾಶ್ಮೀರ ಭಾರತದ ಭಾಗವೇ ಹೌದು
ಒಂದುಸಲ, ಎರಡುಸಲ:— ಕ್ರುಶ್ಚೆವ್.

ಸದ್ಯಕ್ಕೆ ರಾಜಕೀಯ ಹರಾಜು ಕೂಗುಗಳು ಬಂದ್!!

——o——

ಸಂಧ್ಯಾ ಸಮಸ್ಯೆ !

ರಾಕ್ಸಿನಲ್ಲೋ 'ಮಿಸ್ಂ' ಹಾರ!
ಪ್ರಭಾತಿನಲ್ಲೋ 'ಸಂಧ್ಯ' ತಾರ!
ಇಂತು ಕಾಡಿಸಿತ್ತು ಸಮಸ್ಯೆ!
ಓರ್ವ ಕಾಲೇಜು ತರುಣಿಯನ್ನು !

ಇಂದ್ರಭವನದಲ್ಲೋ ಬಾದಾಮ್‌ಹಲ್ವ
ಕೃಷ್ಣಭವನದಲ್ಲೋ ವೆಂಗಾಯ್ ದೋಸೆ !
ಇಂತು ಕಾಡಿಸಿತ್ತು ಸಮಸ್ಯೆ !
ಓರ್ವ ಕಾಲೇಜು ತರುಣನನ್ನು!

ಕುಮಾರ ಪಾರ್ಕಿನಲ್ಲಿ ಬೇಬಿಷೋ!
ನಗರ ಭವನದಲ್ಲಿ ಫ್ಯಾಮಿಲಿ ಪ್ಲಾನಿಂಗ್ ಲೆಕ್ಚರ್!
ಇಂತು ಕಾಡಿಸಿತ್ತು ಸಮಸ್ಯೆ
ಬಸವನಗುಡಿ ಗೃಹಸ್ಥನನ್ನು !

ಮೈಸೂರ್ ಕ್ರೇಪ್, ಬೆನಾರಿಸ್ ಚೋಳಿ !
–ಜಾರ್ಜೆಟ್ ಸೀರೆ ವಾಯಿಲ್ ಕುಪ್ಪಸ!
ಇಂತು ಕಾಡಿಸಿತ್ತು ಸಮಸ್ಯೆ
ಮಲ್ಲೇಶ್ವರದ ಗೃಹಿಣಿಯನ್ನು !

—ಪಾ. ರಾ.

ರಾಗಿಯೋ ಬಲು ಪೌಷ್ಟಿಕರ ಆಹಾರವೋ ಅಥವಾ ಜೋಳವೋ ಎಂಬುವುದು ಇಷ್ಟರಲ್ಲೇ ತೀರ್ಮಾನವಾಗಲಿದೆಯಂತೆ,

—ರಾಗಿ ಅಂಬಲಿಯಲ್ಲಿ ಜೋಳದ ರೊಟ್ಟಿಯನ್ನು ತಿಂದರೆ ಬಲ್ಸೊಗಸು ಎಂದು ಸಿದ್ಧಾಂತವಾಗಬಹುದಂತೆ – ವಿಾನನ್ನು ನಂಚಿಕೊಂಡರೆ ಇನ್ನೂ ಚೆನ್ನೆಂದು ಒಬ್ಬರು ಸೂಚಿಸುತ್ತಾರೆ.

"ನನಗೆ ಕಿರೀಟ ಧಾರಣೆ"

ಕೆಲವಾರು ತಿಂಗಳಿಂದ ಬೆಳಿಗ್ಗೆ ತಲೆ ಬಾಚಿಕೊಳ್ಳುಕ್ಕೆ ಹೋದರೆ ಕಣ್ಣಲ್ಲಿ ನೀರು ತುಂಬಿಕೊಂಡುಬರುತ್ತೆ. ಜಾಹಿರಾತಿನ ಬೊಂಬೆಗಳ ತಲೆ ಇದ್ದ ಹಾಗಿತ್ತು. ನನ್ನ ತಲೆ ಮೊನ್ನೆಮೊನ್ನೆತನಕ ಈಗೀಗ ಬಾಚಣಿಗೇನ ಕ್ರಾಪಿನ ಮೇಲೆ ಎಳೆದರೆ ಸಾಕು, ಅದೂ ಎಷ್ಟು ಹಗುರವಾಗಿ ಅಂತೀರಾ!—ತಲೆ ಮೇಲಿರುವ ಕೂದಲೆಲ್ಲಾ ಬಾಚಣಿಗೇನೆ ಬಯಸಿ ಅದನ್ನೇ ಹತ್ತಿಕೊಂಡುಬಿಡುತ್ತದೆ. ಹೀಗಾಗಿ ತಲೆಮೇಲಿರುವ ಒಂಟೊಂಟಿ ಕೂದಲಾದರೂ ಉಳಿದುಕೊಳ್ಳಲಿ ಎಂಬ ಮಹದಾಸೆಯಿಂದ ಅದಕ್ಕೇ ಬೆಣ್ಣೆ ಎಣ್ಣೆ ಮಾಡಿ, ಅದಕ್ಕೆ ಅಪಾಯ ಸಂಭವಿಸದಂತೆ ಎಳೇ ಮಗೂನ ಸಾಕಿದ ಹಾಗೆ ಸಾಕಬೇಕಾಗಿದೆ.

ಹೀಗೆ ನಾನು ಬೆಳಿಗ್ಗೆ ತಲೆ ಶೃಂಗಾರ ಮಾಡಿಕೊಂಡು ನನ್ನಷ್ಟಕ್ಕೆ ನಾನು ಕನ್ನಡಿ ಎದುರಿಗೆ ಮೆರೆಯುವುದುಂಟು. ಆದರೆ ನಿನ್ನೆ ನಮ್ಮ ರಂಗಜ್ಜಿ ನನ್ನ ತಲೆ ನೋಡಿ ಎಷ್ಟು ಭಟ್ಟಗಿದೆಯೋ ನಿನ್ನ ತಲೆ, ಕಿರೀಟ ಇಡೋದಕ್ಕೇ ಮಾಡಿಸಿದ ಹಾಗಿದೆಯಲ್ಲೋ ನಿನ್ನ ತಲೆ ಎಂದು ನೆಟ್ಟಿಗೆ ಮುರಿದು ದೃಷ್ಟಿ ತೆಗೆದಳು.

ಅಯ್ಯೋ! ದೇವರೇ! ಮತಾಂತರ ಹೊಂದಿದವನಂತೆ ಆಯಿತೇ ನನ್ನ ತಲೆ ಎಂದು ಅರೆ ಕ್ಷಣ ನೊಂದುಕೊಂಡಿದ್ದುಂಟು!

ಆ ವೇಳೆಗೆ ದಿನ ಪತ್ರಿಕೆ ಬಂತು. ಎಲ್ಲಿ ಖೂನಿ ಆಗಿದೆ, ಎಲ್ಲೆಲ್ಲಿ ಅಪಹಾರ, ವಿವಾಹದ ಜಾಹೀರಾತುಗಳು, ಇವನ್ನು ಹುಡುಕಿ ಓದೋ ಗಲಾಟೆ ಶುರು—ಮಿಕ್ಕೆಲ್ಲಾ ದಿನಚರಿ, ಯಥಾಪ್ರಕಾರ.

ಸಂಜೆ ಯಥಾರೀತಿ ಪಾಳುಗೋಡೆ ಕ್ಲಬ್ಬಿಗೆ ಹೋದೆ. ವರಾರದಲ್ಲಿ ನಾಲ್ಕಾರು ಜನ ಸೇವಕರು, ಎಂಟು ಹತ್ತು ಕುರ್ಚಿಗಳು, ಅಷ್ಟೇ ವಿನಹಾ ಒಬ್ಬ ಸದಸ್ಯನಾದರೂ ಇರಬೇಕಲ್ಲ! ಏನುಬಂತು ಇವತ್ತು ನಮ್ಮೂರಿಗೆ! ಎಲ್ಲರ ಮನೆಯಲ್ಲೂ ಸಾಂಕ್ರಾಮಿಕ ಜಾಡ್ಯ ಬಿದ್ದಿದೆಯೇ? ಎಂದು ಯೋಚಿಸಲಾರಂಭಿಸಿದೆ.

ವಾರಪತ್ರಿಕೆಯೊಂದನ್ನು ಹಿಡಿದು ಕುರ್ಚಿಯಮೇಲೆ ಕುಳಿತೆ. ಆ ಸಿನಿಮಾ ತಾರೆಯ ಆತ್ಮಕತೆ ಎಷ್ಟು ಚೆನ್ನಾಗಿ ಬರೆದಿದ್ದರು ಅಂತೀರಿ! ಆಕೆ ತನ್ನ ಮನೆಯ ಹೊಸಲಿಗೆ ಹಬ್ಬಕ್ಕೆಂದು ಕೆಮ್ಮಣ್ಣು ಸುಣ್ಣ ಹಚ್ಚೋ ಚಿತ್ರ, ಗೆಜ್ಜೆಪ್ರ ಮಾಡೋ

ಬೊಂಬೆ, ಎಷ್ಟು ಲಕ್ಷಣವಾಗಿತ್ತು ಅಂತೀರಿ! ಅಯ್ಯೋ! ನಮ್ಮನೆಯಾಕೆ ಕೂಡ ಇದೇ ರೀತಿ ಹೊಸಲಿಗೆ ಕೆಮ್ಮಣ್ಣು ಸುಣ್ಣ ಹಚ್ಚುತ್ತಿರಬಾರದೆ ಎನ್ನಿಸಿತು. ಆದರೆ ಆ ಕ್ಷಣ ಆ ಬೊಂಬೆಯ ತಾರೆಯನ್ನು ಎಲ್ಲೋ ನೋಡಿದ ಜ್ಞಾಪಕ. ಆಹಾ! ಅವಳೇ ಜಾನಕಿ. ನಮ್ಮ ಪೇಟೆಯ ಹುಡುಗೀನೆ. ಈಗ ಮುಂಬಯಿಯಲ್ಲಿ ಪ್ರಸಿದ್ಧ ತಾರೆ. ಓಹೋ! ಎಲ್ಲಾ ಹೆಸರುಗಳೂ ಜ್ಞಾಪಕಕ್ಕೆ ಬಂದುವು. ಅಬ್ಕಾರಿ ಕಂಟ್ರಾಕ್ಟರು ಪಾಪರ್‌ಚೀಟಿ ಎತ್ತಿದ್ದು, ಎಣ್ಣೆ ಅಂಗಡಿ ಸಾಹುಕಾರರ ಹೆಂಡತಿ ಸೀಮೆಎಣ್ಣೆ ಸುರಿದು ಕೊಂಡು ಬೆಂಕಿ ಹತ್ತಿಸಿಕೊಂಡು ಸತ್ತಿದ್ದು, ರಾಜಕಾರಣ ನಾಯಕರೊಬ್ಬರು ತಮ್ಮ ಪದವಿಯನ್ನೇ ಕಳೆದುಕೊಂಡಿದ್ದು, ಹೈಸ್ಕೂಲು ಹೆಡ್ಮೇಷ್ಟರು, ಆಕೆಗೆ ಹಿಂದಿ ಕಲಿಸುಕ್ಕೆ ಅಂತ ಹೋಗಿ ಬಂದೀಖಾನೆಗೆ ಹೋಗಿದ್ದು; ಎಲ್ಲವೂ ಜ್ಞಾಪಕಕ್ಕೆ ಬಂತು. ಆಕೆ ಮೂರು ವರ್ಷಗಳ ಹಿಂದೆ ಮುಂಬಯಿಗೆ ಹೋದ ವಿಚಾರವೂ ನೆನಪಾಯಿತು.

ಫಾರ್ ಹಿ ಈಸ್ ಎ ಜಾಲಿ ಗುಡ್ ಫೇಲೋ! ಎಂದು ಯಾರೋ ಹಿಂದೆ ಹಾಡಿದರು. ತಿರುಗುತ್ತೇನೆ! ಕೊರವ. ತಲೆಗೆ ಬಣ್ಣದ ಕಾಗದದ ಗಾಂಧೀ ಟೋಪಿ ಹಾಕಿದ್ದಾನೆ. ಮಹಾತ್ಮ ಯೇಸುವು ಹುಟ್ಟಿದ ಸಂತೋಷಕ್ಕೆ ಈ ಲೋಕವನ್ನೇ ಮರೆತವನಂತೆ ಭಾಸವಾಗುತ್ತಿದೆ. ಈ ಲೋಕದ ಕಷ್ಟನಿವಾರಣೆ ಮಾಡಲು ಮಹಾತ್ಮ ಯೇಸುವು ಇಲ್ಲಿಗೆ ಬಂದರೆ, ಆತನ ಹೆಸರು ಹೇಳಿಕೊಂಡು ನಮ್ಮ ಕೊರವ ಬೇರೆ ಲೋಕವನ್ನು ಸುಖ ಕಾಣಲು ಬಯಸುತ್ತಿದ್ದಾನೆ. ಕೈಯಲ್ಲಿ ಕಾಗದದ ಕಿರೀಟ ಒಂದನ್ನು ಹಿಡಿದುಕೊಂಡಿದ್ದಾನೆ. ಕೆನ್ನೆಯ ಮೇಲೆ ಅಲ್ಲಲ್ಲೇ ಕುಂಕುಮದ ಕಲೆ.

ಅವನ ಹಿಂದೆಯೇ ಪಟಾಲಂ ಪಟಾಲಮ್ಮೇ ಒಳಕ್ಕೆ ಬಂದಿತು. ಎಲ್ಲರೂ ಯಾರ ಮನೆಯಲ್ಲೋ ಹಚ್ಚವನ್ನಾಚರಿಸಿ ಬಂದಂತೆ ಕಾಣಿಸಿತು.

ವಠಾರದಲ್ಲೆಲ್ಲಾ ಕುಳಿತಿದ್ದ ಸದಸ್ಯ ನಾನೊಬ್ಬನೇ. ಗಂಭೀರ ರೀತಿಯಲ್ಲಿ ಕೊರವ ನನ್ನ ಹತ್ತಿರಕ್ಕೆ ಬಂದು ನನ್ನ ತಲೆಯನ್ನೂ ನನ್ನನ್ನೂ, ಸಂಬಳದ ದಿನ ಹೆಂಡತಿಯು ಗಂಡನ ಜೇಬನ್ನು ನೋಡುವ ಕ್ರೂರತೆಯಿಂದ ನೋಡಿದ.

"ಸಭೀಕರೇ! ಸದಸ್ಯರೇ!!" ಎಂದು ಒಂದು ಕಿರುಲು ಕಿರುಲಿದ. ಎಲ್ಲರೂ ನನ್ನ ಸುತ್ತ ಗುಂಪುಕಟ್ಟಿದರು.

"ಈ ಶುಭಮುಹೂರ್ತದಲ್ಲಿ, ಈ ನಾಗರಿಕ ಪೇಟೆಯ ಜನರಲ್ಲಿ ಅರ್ಧಜನ ಹಿಂದೂಗಳು ಕ್ರಿಸ್‌ಮಸ್ ಆಚರಿಸುತ್ತಿರುವರು. ಇನ್ನರ್ಧಜನ ಪೇಟೆಯ ನಾಗರಿಕರು ಸಮಾಜಸೇವಾಕರ್ತೃಗಳ ಸಭೆಗೆ ಹೋಗಿರುವರು. ಇವೆರಡನ್ನೂ ತಪ್ಪಿಸಿಕೊಂಡು ಈತ ಇಲ್ಲಿ ಕುಳಿತಿದ್ದಾನೆ. ಅಂದಮೇಲೆ ತನ್ನ ಸ್ವಾತಂತ್ರ್ಯವನ್ನು ತಾನೇ ಕಾಪಾಡಿಕೊಂಡಿದ್ದಾನೆ. ಯೇಸುವು ಈತನನ್ನು ಮೆಚ್ಚಿರಲೇಬೇಕು. ಅತ್ತ ಸಮಾಜಸೇವೆಯೂ ಇವನ

ಆತಂಕವಿಲ್ಲದೆ ಚೆನ್ನಾಗಿ ಆಗಿರಲೆಬೇಕು! ಅಂದಹಾಗೇ ಯೇಸುವಿನ ಧ್ಯೇಯವೂ ಸಮಾಜದ ಉದ್ಧಾರವೇ ಅಲ್ಲವೇ!

ಆದುದರಿಂದ ಈತನೇ ನಮ್ಮ ಪಟ್ಟಣದಲ್ಲಿ ಸಮಾಜ ಸುಧಾರಣೆಗೆ ಅತ್ಯಂತ ಸೇವೆ ಮಾಡಿದವನು. ಈತನ ತಲೆಯನ್ನು ನೋಡಿ. ಈ ಕಿರೀಟಕ್ಕೇ ಮಾಡಿಟ್ಟ ಹಾಗಿದೆ. "ಸಮಾಜಸೇವಾ ಶಿರೋಮಣಿ" ಎಂದು ಈತನಿಗೆ ಬಿರುದು ಕೊಟ್ಟು ನಿಮ್ಮೆಲ್ಲರ ಒಮ್ಮತದಿಂದ ಈತನಿಗೆ ಈ ಕಿರೀಟಧಾರಣೆಯನ್ನು ಮಾಡುತ್ತೇನೆ" ಎಂದು ಆ ಕ್ರಿಸ್‌ಮಸ್ ಕಿರೀಟವನ್ನು ನನ್ನ ತಲೆಗೆ ಮಡುಗಿ ಅಮುಕಿದ.

ಎಲ್ಲರೂ ಜಯಘೋಷಮಾಡಿ, ಕೆಲವರು ಸಿಗರೇಟ್ ತುಂಡುಗಳನ್ನು ಕೆಲವರು ಸೋಡಾನೀರನ್ನೂ ನನ್ನೆಡೆಗೆ ಎಸೆದು ರಂಪ ಎಬ್ಬಿಸಿದರು.

ಏಕೆ ಹೇಳುಕ್ಕೆ ಬಂದೆ ಎಂದರೆ, ರಂಗಜ್ಜಿ ಹೇಳಿದ್ದು ಈ ರೀತಿಯಲ್ಲಿ ಪರ್ಯವಸಾನ ಆಗಬೇಕಾಗಿದ್ದರೆ, ಇದರ ಮರ್ಮ ಏನಿರಬಹುದು?



"ಏ! ಏನಯ್ಯಾ, ನೀರನ್ನ ಹಣದ ಹಾಗೆ ಖರ್ಚುಮಾಡ್ತಿದೀಯಲ್ಲ!"

ರಶ್ಯಾದವರು ಬಂದಾಗ

ಭಾರತ ಸಂಚಾರದ ವೇಳೆಯಲ್ಲಿ ರಷ್ಯಾದ ನಾಯಕರು ಯಾವ ನಗರಕ್ಕೆ ಹೋದರೂ ಅಸಾಧ್ಯ ಜನಸಂದಣಿಯಂತೆ--

ಆದರೆ ಮೊನ್ನೆ ನಾನು ಮಾರ್ಕೆಟ್ ಚೌಕದಲ್ಲಿ ಸೈಕಲ್‌ನಿಂದ ಬಿದ್ದಾಗ ನನ್ನ ಸುತ್ತ ಕೇವಲ ಐನೂರೇ ಮಂದಿ ನೆರೆದಿದ್ದರು!

*   *   *

ರಷ್ಯಾದ ನಾಯಕರು ಒಂದೊಂದು ಸಸಿ ನಟ್ಟು "ಎಲ್ಲಿ, ಸಸಿಗೆ ಎರೆಯೋಧಕ್ಕೆ ನೀರು ಕೊಡಿ"—ಎಂದು ಕೇಳಿದರಂತೆ.

ಸೊಸಿ ನಟ್ಟು ಕ್ಯಾಮರಾದವನನ್ನು ಕರೆಯುವ ನಮ್ಮಲ್ಲಿನ ಸಂಪ್ರದಾಯವನ್ನು ಅವರಿಗೆ ಯಾರೂ ತಿಳಿಸಲೇ ಇಲ್ಲವೆ?

*   *   *

ಈ ಹೈಡ್ರೊಜನ್ ಬಾಂಬಿನ ಯುಗದಲ್ಲಿ ನಾಲ್ಕಂತಸ್ತಿಗಿಂತ ಹೆಚ್ಚಿನ ಕಟ್ಟಡಗಳನ್ನು ಕಟ್ಟಬೇಡಿ ಎಂದು ಕ್ರುಷೇವರು ಹೇಳಿದರಂತೆ—

"ಅದಕ್ಕೇ ನಾವು ಮಹಡಿಯಿಲ್ಲದ ಮನೆಯನ್ನೇ ಕಟ್ಟಿಸಿದ್ದು"—ಎಂಬುದಾಗಿ ನಮ್ಮ ಪರಿಚಿತರನೇಕರು ಮಿಾಸೆ ತಿರುವುತ್ತಿದ್ದಾರೆ.

*   *   *

ತಮ್ಮ ಬರ್ಮಾ ಸಂಚಾರದ ಕಾಲದಲ್ಲಿ ಕ್ರುಷೇವರು ಸುದ್ದಿಗಾರನೊಬ್ಬನೊಡನೆ ವಾಗ್ಯುದ್ಧಕ್ಕೆ ನಿಂತು ಗೆದ್ದರಂತೆ—

ಅವರು ತಮಿಳಿನಲ್ಲಿ ಮಾತನಾಡಿದರೋ ಎಂದು ಸಂದೇಹ ನಮಗೆ.

*   *   *

ಸದರೀ ಕ್ರುಷೇವರು ನಾವು ಒಗ್ಗರಣೆ ಕೊಡುವ ಕ್ರಮವನ್ನು ಪರಿಶೀಲಿಸಿ ಅದನ್ನು ಟೀಕಿಸಿದರೆಂದು ಎಲ್ಲಿಯೂ ಪ್ರಕಟವಾದಹಾಗಿಲ್ಲ.

*   *   *

ಅವರು ಕೂರಲು ಹೋದ ಮಂಚ ಮುರಿದರೂ ಕ್ರುಷೇವ್ ಕೆಳಕ್ಕೆ ಬೀಳಲಿಲ್ಲ.

—ಅವರು ಬಿದ್ದರು ಎಂದು ಪ್ರಕಟಿಸಿ ಅಮೇರಿಕದವರನ್ನು ಸಮಾಧಾನಪಡಿಸಿದ್ದರೆ ಏನು ನಷ್ಟವಾಗುತ್ತಿತ್ತು?

*   *   *

ಮುಂಬಯಿಯಲ್ಲಿ ಕ್ರುಷೇವ್ ಮತ್ತು ಬುಲ್ಗನೀನರಿಗೆ ಟೋಪಿ ಹಾಕಿದರು—ಆದರೂ ಡಲ್ಲೇಶರಿಗೆ ಸಮಾಧಾನವಿಲ್ಲವಂತೆ. ಕೊನೆಗೆ ಅಂಗವಸ್ತ್ರ ಹೊದ್ದಿಸಿ ಪೇಟಕಟ್ಟಿ ಮೆರೆಸಿದ್ದನ್ನು ಅವರು ಮರೆತಾರೇ?

* * *

ಬಟ್ಟತಲೆಯಲ್ಲಿ ಕೂದಲು ಮೂಡಿಸಲು ಪ್ರಯತ್ನಿಸುತ್ತಿದ್ದ ಮಹನೀಯರು ಕ್ರುಷೇವ್ ಬಂದು ಹೋದಮೇಲೆ ಆ ಪ್ರಯತ್ನವನ್ನು ಬಿಟ್ಟುಕೊಟ್ಟಿದ್ದಾರೆಂದು ವದಂತಿ.—ಸದ್ಯ ಆವರು ಬುಲ್ಗನಿನ್ ಗಡ್ಡಕ್ಕಾಗಿ ಹಾತೊರೆಯದಿದ್ದರೆ ಸಾಕು.

* * *

ಬುಲ್ಗನೀನ್ ಕ್ರುಷೇವ್ ರಷ್ಯಾಕ್ಕೆ ಹಿಂದಿರುಗಿದರೆಂಬ ಸುದ್ದಿ ಕೇಳಿ—"ಹೇಗೂ ಇಷ್ಟು ದಿವಸ ಇದ್ದಿದ್ದಾಯಿತು; ಊರೂರೆಲ್ಲಾ ನೋಡಿದ್ದಾಯಿತು; ನಮ್ಮೂರ ಜಾತ್ರೆ (ಬರುವ ವಾರ) ನೋಡಿ ಹೋಗಿ ಎಂದು ಯಾರೂ ಅವರಿಗೆ ಹೇಳಲಿಲ್ಲವೆ"—ಎಂಬುದಾಗಿ ನಮ್ಮ ವೆಂಕಜ್ಜಿ ಆಕ್ಷೇಪಿಸುತ್ತಿದ್ದಾರಲ್ಲ!

* * *

—ರಾಮಿ.



"ಏನ್ಸ್ವಾಮಿ, ಸಮ್ಮರ್‌ಕ್ರಾಪ್ ಮಾಡ್ಸೋಹಾಗಿದ್ರೆ, ನಮ್ಮ ಹುಡುಗನ್ನ ಪ್ರಾಕ್ಟೀಸಿಗೆ ಬಿಡಲೇ?"

ಕರ್ನಾಟಕ

ಕಿವಿಯಿಂದ ಕಿವಿತನಕ ನಕ್ಕೆ ನನಗೆ ನಾನೇ ಕನ್ನಡೀಲಿ ಮುಖ ನೋಡಿಕೊಂಡು. ಸ್ವಲ್ಪ ಸೊಟ್ಟಾಗಿದ್ದ ಗರಿಗರಿ ಟೋಪಿ ಸರಿಮಾಡಿಕೊಂಡೆ-ಕೆಂಚಗಾಗಿದ್ದ ಹುರಿಮೀಸೆಗೆ ಕರಿ ರಂಗು ಸರಿಯಾಗಿ ಸವರಿದೆ. ಆದರೆ ಒಮ್ಮೆಲೇ ಸಿಡಿಲೆರಗಿತು.

ಕಣ್ಣರಳಿಸಿ ನೋಡಿದೆ, ಕನ್ನಡಿಯಲ್ಲಿ ನನ್ನ ಹಿಂದೆ ಪುಟ್ರಂಗಯ್ಯ ನಿಂತಿದ್ದ. ಹಿಗ್ಗು ಕುಗ್ಗಿತು. ಕಿವಿತನಕ ಹಿಗ್ಗಿದ ಬಾಯಿ ಮುದುಡಿ ಮೂಗಿನ ಕೆಳಗೆ ಅವಿತು ಕೊಂಡಿತು. ಗಗನವನ್ನು ಮೂಸುತ್ತಿದ್ದ ಮೀಸೆ ಪಾಪಚ್ಚಿಯಂತೆ ಪಾತಾಳ ನೋಡಿತು. ಮುಖ ಮೂರುಪಾವು ಹಳೇಹುಣಿಸೆ ತಿಳಿ ಕುಡಿಸಿದಂತಾಯಿತು.

ಕುಸಿದು ಕುಳಿತೆ ಕೆಳಗೆ-ಚಾಪೆಯ ಕೆಳಗೆ ತೂರುವ ಸನ್ನಾಹದಿಂದ. ಪುಟ್ರಂಗು ಆಗಲೇ ರಂಗೋಲಿ ಕೆಳಗೆ ತೂರಿಬಿಟ್ಟಿದ್ದ. ಅವ ಯಾವಾಗಲೂ ಹಾಗೆ, ಹಳ್ಳಿ ಹೈದ ನಾದರೂ ಬಲು ಹುಳೀಮನುಷ್ಯ - ನಾವು ಮಾಡುವ ದೇಶಸೇವೆಯನ್ನೆಲ್ಲಾ ವಂಡ್ರ ಗಣ್ಣಿಂದ ನೋಡಿ ಕೆಟ್ಟದಾಗಿ ನಗುವನು. ಯಾವಾಗಲೂ ಕಠೋರ ಸತ್ಯವನ್ನೇ ಆಡುವವ ಅವನನ್ನು ನೋಡಿದೊಡನೆ ನನ್ನ ಗಾಂಧೀಟೋಪಿ ಕಳೆಗುಂದಿ ತಲೆಯಿಂದ ಇಳಿದು ಜುಬ್ಬದ ಜೇಬು ಸೇರಲು ತವಕಪಡುವುದು. ಪ್ರಸ್ತುತ ಕನ್ನಡಿಯಲ್ಲಿ ಅವನನ್ನು ಕಂಡೊಡನೆ ನನ್ನ ಕೈಗಳು ಅವುಗಳ ಅರಿವಿಲ್ಲದೇ ಟೋಪಿಯನ್ನು ತೆಗೆದು ಬೆನ್ನಹಿಂದೆ ಬಚ್ಚಿಟ್ಟುಕೊಂಡಿದ್ದುವು.

"ಬಾಗುಂಡಾವೇಮಯ್ಯೋ!" ಎಂದು ತೆಲುಗಿನಲ್ಲಿ ಆರ್ಭಟಿಸಿದ. ಸರಿ ನನಗೆ ನಾಗರಚಳಿ ಪ್ರಾರಂಭವಾಯ್ತು. ಗೊತ್ತು ಇನ್ನವನು ನನ್ನ ಕರ್ನಾಟಕದ ಬಗ್ಗೆ—ವಿಶಾಲಾಂಧ್ರದ ಬಗ್ಗೆಯ ನೀತಿಗೆ ವರೆ ಹಚ್ಚುವ ಸನ್ನಾಹವಿದೆಂದು.

ಒಳಬಾಗಿಲಿಂದ ಮೀನಾಕ್ಷಿ ಇಣಿಕಿದಳು. ಸರಸರನೆ ಒಂದು ತಾಟಿನಲ್ಲಿ ಎರಡು ಚಪಾತಿ ಅವರೆಕಾಳು ಸಾಂಬಾರು ಈರುಳ್ಳಿಚಿಟ್ಣಿ ಹನ್ನೆರಡು ಗಜ್ಜುಗದ ಗಾತ್ರದ ತುಪ್ಪ, ಒಂದು ತಂಬಿಗೆ ತಿಳೀನೀರು ತಂದಿಟ್ಟು ಲಂಚಕೊಟ್ಟವಳಂತೆ ನುಸುಳಿಕೊಂಡು ಬಿಟ್ಟಳು. ಇನ್ನು ನನ್ನದೇ ತಿಥಿ.

ಪುಟ್ರಂಗಯ್ಯ ಚಪಾತಿ ಮುಗಿಸಿ ನೀರು ಕುಡಿದು ಆಳವಾಗಿ ತೇಗಿ ಕೈ ತೊಳೆದು ಮೀಸೆ ಒರಸಿಕೊಂಡು ನನ್ನ ಕಡೆ ತಿರುಗಿದ. ಹಾಳಾದ ಆರಾಮು ಕುರ್ಚಿಯೇ ನನ್ನ ನುಂಗಬಾರದೇ. ಭಾರತಮಾತೆಯ ಪುತ್ರ-ಜೇಲಿಗೆ ಹೋದ ಧೀರ ಅಧೀರನಾಗುವುದೆ? ರಾಮಬಾಣ ಎದುರಿಸಲು ಸಿದ್ಧನಾಗಿ ಕುಳಿತೆ—

" ಬಲು ಸೆಕೆ ಬಲು ಸೆಕೆ – ಬಳ್ಳಾರಿ-ರಾಯದುರ್ಗ – ಆಲೂರು-ರಾಯಚೂರು ಕೋಲಾರ – ಚಿತ್ರದುರ್ಗ ಎಲ್ಲಾ ಕಡೆಯೂ ಬಲು ಸೆಕೆ"

" ಅಲ್ಲೆಲ್ಲಾ ಸುತ್ತಿಕೊಂಡು ಬಂದೆಯಾ ಪುಟ್ರಂಗೂ"

" ನಾನ್ಯಾಕೆ ಸುತ್ತೋಕೆ ಹೋಗಲಿ ನೀವುಗಳೇ ಮಾಡಿಕ್ಕಿರೊ ಸೆಕೆ"

" ನಾವುಗಳೆ?"

" ಕಣಿಕೇಳಪ್ಪಾ ....ಮತ್ತೆ ನಾವುಗಳೆ? – ಜನಗಳ ಸೇವೆಮಾಡೋರು ನೀವೆ ಅಲ್ವಾ—"

" ಹಂ.... ಅಂದರೇ .... ಅರ್ಥವಾಗಲಿಲ್ಲ" – ಎಂದು ಕತ್ತಿನ ಸಂದಲ್ಲಿನ ಬೆವರು ಒರಸಿದೆ.

" ಕಷ್ಟ – ಅಂಧ್ರಾದಾಗಿರೋ ಟೋಪಿಯವರು ಚಿತ್ರದುರ್ಗ – ದುರ್ಗ ಏನು ಮೈಸೂರುತನಕ ನಾಲಿಗೆ ಚಾಚಿದಾರೆ – ನೀವು ಆಕಡೆ ಪೂನ ಈಕಡೆ ಕಡಪ ಇನ್ನೇನು ಕರ್ನೂಲು ವಿಜಯವಾಡಾನೂ ನಮ್ಮ ಕೃಷ್ಣದೇವರಾಯನದೇಂತ ಸವಾಲು ಹಾಕಿದ್ದೀರ, ಅಂದಮೇಲೆ ಮಾತಿನ ಬಿಸಿ ಜೋರು ಜಿದ್ದಿನ ಸತ್ಯಾ ಆಗ್ರಹ ಬಿರುಸಿನ ಭಾಷಣ ಅಂದಮೇಲೆ ಆದರ ಕಾವಿಗೆ ಸೆಕೆ ಆಗೋದು ನ್ಯಾಯ ಅಲ್ಲವೆ?"

" ನ್ಯಾಯ"

" ಅಂದಮೇಲೆ ನೀವೇ ಸೆಖೆಗೆ ಕಾರಣಾಂತ ಒಪ್ಕೊಂತಿರೋ ಈಗಾ?"

—ಹಣೆಮೇಲಿನ ಬೆವರುಸಾಲನ್ನು ಗಾಂಧಿಟೋಪಿಯಿಂದ ಒತ್ತಿದೆ. ಮೀನಾಕ್ಷಿ ಒಳಗಿಂದ ಒಂದು ಲೋಟ ನೀರು ಕುಡಿಸಿದಳು.

" ನಂದೊಂದು ನಿಸೂರು ಮಾರ್ಗ ಹೇಳ್ತಿನಿ ಹಂಗೆ ಮಾಡಿದರೆ ಒಬ್ಬರಿಗೂ ತಂಟೆ ಇರೋದಿಲ್ಲ – ಹೇಳ್ಲೆ?"

" ಹೇಳಪ್ಪ ಪುಟ್ರಂಗು ಕೇಳೋಣಾ"

" ಬಲೇ ಸುಲುಭ – ಅಲ್ಲಿಯವರಲ್ಲಿ ನಮ್ಮ ರಾಜ್ಯ, ಇಲ್ಲಿನ ಅಲ್ಲಿಯವರಿಗೆ ಅವರ ರಾಜ್ಯ ಹಿಂಗೆ ಮಾಡಿದರೆ ಹೆಂಗೆ?"

" ಹೆಂಗಂದ್ರೆ?"

" ಈಗಾ ನಿಮ್ಮ ಗಲ್ಲೀವಳಗೆ ನಾಲ್ಕು ಆಂದ್ರದವರ ಮನೆ ಅವೆ ಅಂತ ಇಟ್ಕೊ- ಅವನ್ನ ಅಂಧ್ರಕ್ಕೆ ಸೇರಿಸಿಬಿಡೋದು – ಅಲ್ಲಿ ಆಂಧ್ರದಾಗಿರೋ ಕನ್ನಡ ಮನೆಗಳನ್ನ ಇಲ್ಲಿಗೆ ಸೇರಿಸಿಬಿಡೋದು ಹೆಂಗೆ?"

—ನನಗೆ ರೇಗಿತು ಇದು ಎಂಥಾ ಸಲಹೆ. ಆಗೋಮಾತೆ ಅದೂ–ರೇಗಿ ಹೇಳಿದೆ.

" ನಿನ್ನ ಸಲಹೆಗೆ ಬೆಂಕಿ ಬಿತ್ತು"

"—ಸ್ವಲ್ಪ ಯೋಚನೆಮಾಡಿ ಸಿವಾ .. ಈಗಾ ಆ ಊರ್ನ ಕೊಡಿ ತಾಲ್ಲೂಕೆ ಕೊಡೀಂದ್ರೆ ಈ ಹಳ್ಳೀನೆ ಕೊಡೀಂದ್ರೆ ಯಾರಿಗೂ ಹೊಟ್ಟೆಲಿ ಊರುಗಾಯಿ ಸುರಿದ ಹಾಗೆ ಆಗೋ ಮಾತೆ. ಈಗ ನಮ್ಮೂರಲ್ಲಿ ಐದನೆ ಗಲ್ಲೀಲಿ ಆರು ಆಂಧ್ರದ ಮನೆ ಅವೆ – ಅವರು ಕರ್ನೂಲಿಗೇ ಕಂದಾಯ ಕಳಿಸಲಿ – ತೆಲುಗಿನಲ್ಲೇ ನಮ್ಮ ಹುಡುಗರನ್ನ ಬೈಲೀ....ಅಲ್ಲಿಂದಲೇ ಅವರಿಗೆ ಸಂಬಳ ಕಳಿಸಲಿ .. ಎಲ್ರಿಗೂ ಸುಲಭ. ಮುಲುಕು ನಾಡು ಕರ್ನಾಟಕರಿಗೆ ಹ್ಯಾಗೇಂತ ನೀನು ಕೇಳಬಹುದು – ಇತ್ಲಾಗೆ ಕರ್‌ನಾಟಕರು ಅತ್ಲಾಗೆ ಮುಲುಕುನಾಡು ಎಷ್ಟ್ಲ ಚೇಸೇದಿ? ಅವರು. ಮಾತಿಗೆ ಕನ್ನಡ ಬರಹಕ್ಕೆ ತೆಲುಗು ಬೈಯ್ಯುಕ್ಕೆ ಸಂಸ್ಕೃತ ಉಪಯೋಗಿಸಿದರೆ ಯಾರಿಗೂ ತೊಂದರೆ ಇಲ್ಲ... "

—ನಾನು ಮಾತೇ ಆಡದೆ ಸೂರು ನೋಡಿದೆ.

" ಯಾಕೆ ಮಾತಾಡಾಕಿಲ್ವಾ – ನಾಟಕಾ ಕರ್ತಾ....ನಾಲ್ಕುದಿನ ಹಾಯಾಗಿದ್ದೆ ನೋಡು"

" ಯಾವಾಗಯ್ಯಾ...."

" ಅದೇ ಆಕಾಶದಾಗೆ ಕೆಂಪು ನಕ್ಷತ್ರ ಬಂದಿತ್ತಲ್ಲಾ – ಲಾಲ್‌ಬಾಗಿಲು ಬಲೇ ಲಾಲ್ ಆದ ದೀಪದಿಂದ ಗಿಡಗಿಡಾನೇ ಕೆಂಪಗಾಗಿತ್ತಲ್ಲಾ...."

" ಸರಿಯಾಗಿ ಹೇಳಪ್ಪಾ"

" ಅದೇ ಬಲ್‌ಗ್ಹಾನಿ ಕ್ರಿಷ್ಟ್ರಾವ್ ಬಂದಾಗ"

" ಹಹಹ....ಬುಲ್ಗಾನಿನ್ ಕೃಷೋಫ್ ಅಂತ ಸರಿಯಾಗನ್ನಯ್ಯಾ. ರಷ್ಯಾದ ಮಹಾನಾಯಕರು"

" ಅದೇ ನಾನು ಅಂದಿದ್ದು – ಆತ ಬಲುಗ್ಹಾನೀಂತ ಕೇಳಿದೆ. ಆ ಕೃಷೋಫ್ ನಮ್ಮ ಭಗವದ್ಗೀತೆ ಕೃಷ್ಣರಾಯ ಕೌರವರಿಗೆ ಹೇಳಿದಂಗೇ ಇಂಗು ತಿನ್ನಿಸಲಿಲ್ವ— ಗೋವಾ ಕಾಸ್ಮೀರಿ ವಿಚಾರದಾಗೆ"

" ನಿಜ ನಿಜ"

" ಹೌದು ನಿಜ-ಇಂಥವರು ಬಂದಾಗ ದುಡ್ಡು ನೀರಿನಂಗೆ ಕರ್ಚು, ಜೇನುತುಪ್ಪದ ಗಡಿಗೆ ಒಡೆದಾಗ ಬಳಿದು ತುಂಬಿದ ಹಂಗೆ. ಕೈ ನೆಕ್ಕದೆ ಇರೋಕಾಗತ್ತಾ?"

ಹಹ....ಅಂ.... ಏರ್ಪಾಟೂ ಅದ್ಧೂರೀದು ಅಂದ್ರೆ ಹಾಗಿಲ್ಲದಿದ್ರೆ ಹ್ಯಾಗೆ?"

" ಅದೇ ನಾನೂ ಅಂದದ್ದು – ಕಾಸಿಲ್ದ ಕಮಂಗಿ ಕೆಂಪುಬಾವುಟ ಹಿಡಿದು ಹೊಟ್ಟೆಗಿಲ್ಲೋ ಅಂತ ಕೂಗಿದರೆ ಕಂಬಿಕಿತ್ತಿದೆಯಾ, ತೆಲ್ಲಂಗಾಣದೋನೇ ಅಂತ ಕೆನ್ನೆ ಗಿಕ್ಕಿ ಜೈಲು ಕಾಣಿಸಿದಿರಿ. ಈಗ ನೀವೇ ಕೆಂಪುಬಾವುಟ ಹಿಡಿದು ಕಬ್ಬಿಣದ ಕಾರ್ಖಾನೆ ಕಡೆ ಕಣ್ಣುಬಿಡ್ತಿದ್ದೀರಿ – ದೊಡ್ಡೋರು ಮಾಡೋದು ರಾಜಕೀಯ, ಹೊಟ್ಟೆಗಿಲ್ದೊನು ಮಾಡಿದ್ರೆ ಎಲ್ಡು ಮಡಗ್ತೀರ...."

— ಪಿಳಿಪಿಳಿ ಕಣ್ಣು ಬಿಟ್ಟು ನೋಡ್ತಾ ಇದ್ದೆ ಉಸುರಿತ್ತದೆ. ಮೀನಾಕ್ಷಿ ಒಂದು ಲೋಟ ಹಾಲು ತಂದು ಪುಟ್ರಂಗುಗೆ ಕೊಟ್ಟು ನನ್ನ ನೋಡಿ ಮೂಗು ಕೆರೆದುಕೊಂಡು ಹೋದಳು. ಹಾಲು ಕುಡಿದು ಮತ್ತೆ ಕರಾಟೆಗೆ ತೆಗೆದುಕೊಳ್ಳಲೆಂದೆ? ನಾನು ಇನ್ನೂ ಒಂದು ಲೋಟ ನೀರು ಕುಡಿದೆ.

"ಮತ್ತೆ ಕಡಿಮೆ ದುಡಿಮೆಯೋರಿಗೆ ಮನೆ ಕಟ್ಟಿಸಿಕೊಡ್ತೀರಂತೆ ನೀವು"

"ಹೌದು ಹೌದು Low income Group House building scheme ಅಂತ ಇದೆ...."

"ಅಯ್ಯಯ್ಯ ನಿನ್ನ ಇಂಗ್ಲೀಷಿಗೆ ಬೆಂಕಿ ಬಿತ್ತು. ಕನ್ನಡಾನೆ ನನಗೆ ಸರಿಯಾಗಿ ಬರಾಕಿಲ್ಲಾ ಇನ್ನು ನಿನ್ನ ಇಂಗ್ಲೀಸು ಯಾರಿಗೆಬೇಕು....ಹಂಗಾರೆ ನನಗೊಂದು ಮನೆ ಕಟ್ಟಿಸಿಕೊಳ್ಳೋಕೆ ನೀನು ಸಾಲಾ ಕೊಡುಸು"

"ಹುಂ .. ಆಂ....ಮತ್ತೆ ನೀನು ಕಾಲುಭಾಗ ದುಡ್ಡು ಮೊದಲು ಕೊಡಬೇಕು– ಉಳಿದದ್ದು ನೋಡಬಹುದು"

"ಅಂದ್ರೆ ಎಂಟುಸಾವಿರ ಹಾಕಿ ಮನೆ ಕಟ್ಟೋಕೆ ಎಲ್ಡು ಸಾವಿರ ನಾನು ಕೊಟ್ಟು ಬಿಡೋದೂನ್ನು"

"ಹೌದು...."

"ಹೋಗಯ್ಯೋ....ಎಲ್ಡು ಸಾವಿರ ಇದ್ರೆ ಗುಡಿಸಿಳ್ನಾಗೆ ಇರ್ತಿದ್ದೆ. ನಮ್ಮ ಜನಗಳು ಎಲ್ಲಿಂದ ತಂದೋವು ಆ ದುಡ್ನ....ಇದೂ ದುಡ್ಡಿರೋ ನನ್ನ ಮಕ್ಳಿಗೇ ಸಹಾಯಾನ್ನೂ ....ಬಡವನಿಗೆಲ್ಲಾ ಮಡುಗೋರೇ...."

"ಈಗ ನಿನಗೇನಾಗಬೇಕಪ್ಪಾ" ಎಂದೆ ಕಸಿವಿಸಿಯಿಂದ. ಹಾಕಿದ ಖದ್ದರ್ ಜುಬ್ಬ ಚೀಳಿನಿಂದ ಮಾಡಿದಂತಾಗಿತ್ತು. ಗದುಗಿನ ಚಪ್ಪಲಿ ಮೊಸಳೆ ಹಲ್ಲಿನಿಂದ ಹೆಣೆದಂತಿತ್ತು.

"ಭಾವಿ ತಗಸಾಕೆ ತಕಾವಿ ಸಾಲಾ ಮುನ್ನೂರು ತೀರ್ಸದಿದ್ರೆ ಭಾವಿ ಮುಚ್ಚುಸ್ತಾರಂತೆ ಶಾನುಭೋಗರು – ಮುನ್ನೂರು ತತ್ತಾ...."

—ಬದುಕಿದೆಯಾ ಬಡಜೀವಾ ಎಂದು ಆಗಲೆ ಒಳಕ್ಕೆ ಹೋಗಿ ಆಗತಾನೆ ನನ್ನ ಶಿಫಾರ್ಸಿನಿಂದ ಮೊಟಾರುಲೈನು ದೊರಕಿದ ಮಲ್ಲೇಶಿಯಿಂದ ಬಂದ ಐನೂರು ರೂಪಾಯಲ್ಲಿ ಮುನ್ನೂರು ತೆಗೆದು ಅವನಕೈಗೆ ಹಾಕಿದೆ.

ಒಂದು ನಮೂನೆ ಕೊಂಗುದೃಷ್ಟಿಯಲ್ಲಿ ನೋಡಿ ನಕ್ಕು "ಬತ್ತೀನಿ ತಾಯಿ" ಎಂದು ಅವಳಿಗೆ ಹೇಳಿ ಸುಂಟರಗಾಳಿಯಂತೆ ಗಿರ್ಕಿ ಎಕ್ಕಡ ಸದ್ದುಮಾಡುತ್ತಾ ಹೊರಟು ಹೋದ.

ಮತ್ತೆ ನನ್ನ ಮುಖ ಅರಳಿತು – ಕಣ್ಣ ಡಿ ನಕ್ಕಿತು. ಈ ಟೀಕಾಚಾರ್ಯರ ಪುಟ್ರಂಗು ಬಂದರೆ ನನಗೆ ಇಂಗು ತಿನ್ನಿಸಿಯೇ ಹೋಗೋದು. ಅದರ ಹುಳಿ ತೆಗೆಯೋಕೆ ಸಂಜೆ ಬಹುದೂರ ಪೂರ ಹೋಗಿ ತೂರಾಡಿ ಬರಬೇಕು.

|| ಜೈಹಿಂದ್ ||

— ದಾಶರಥಿ ದೀಕ್ಷಿತ್.

—o—

★ ಮಹಿಮೆ ★

ಏನು ಬಂತೋ ಕೇಡು, ಕಾಲಮಹಿಮೆ!

ಪಂಡಿತ ಪುತ್ರಗೆ ಅಕ್ಷರ ನಾಸ್ತಿ!
ರೈತನ ಮಗನಿಗೆ, ಹಡಗಲಿ ನೌಕರಿ!
ನಾವಿಕ ಸುತ, ಅವ ನೆಲದಲಿ ಕುಳಿತ,
ವೈದ್ಯನ ಮಗ ಅವ ಹೋಟಲನಿಟ್ಟ!
ಏನು ಬಂತೋ ಕೇಡು, ಕಾಲಮಹಿಮೆ!

ಲಾಯರ ಮಗ ಅವ ಹುಟ್ಟುತ ಮೂಗ,
ಸಾಹಿತಿ ಹುಡುಗಗೆ ಸತ್ಯವೆ ದೈವ!
ಮಂತ್ರಿಯ ಮಗನಿಗೆ ತಂತ್ರವೆ ಇಲ್ಲ,
ಮೇಷ್ಟರ ಮಗ.... ಅವ ಕುರುಬನೆ ಅಲ್ಲ!
ಏನು ಬಂತೋ ಕೇಡು, ಕಾಲಮಹಿಮೆ!

ಕುರುಬನ ಮಗನಿಗೆ ಕಂಬಳಿ ಆಗದು
ನೇಯ್ಗೆಯ ಹುಡುಗನೊ, ಬೆತ್ತಲೆ ಯೋಗಿ!
ಬೆಸ್ತರ ಹುಡುಗಗೆ ಗಾಳದ ವಿದ್ಯೆಯು
ಸೋಂಕೇ ಇಲ್ಲ! ಸೋಜಿಗವಲ್ಲವೆ?
ಏನು ಬಂತೋ ಕೇಡು, ಕಾಲಮಹಿಮೆ!

—ಕಾಮತ್.

ಅನರ್ಥಕೋಶ

ಅವಿವಾಹಿತ :—ಸ್ತ್ರೀ ಹಿಂಸೆ ಅಧರ್ಮವೆಂದರಿತವ.

ಇಂಜಕ್ಷನ್ :—ನುಂಗಲಾರದ ತುತ್ತು.

ಕಾಶ್ಮೀರ :—ಪಾಕಿಸ್ತಾನ್ ನಾಯಕರ ರಕ್ತದ ಒತ್ತಡ ಹೆಚ್ಚಿಸುವ ಹೆಸರು.

ಗೊರಕೆ :—ಆತ್ಮಾನಂದ ಹೊಂದಲು ಸುಲಭ ಮಾರ್ಗ.

ಟೆಲಿವಿಷನ್ :—ರೇಡಿಯೋ ಗಾಯಕಿಯನ್ನು ಕಣ್ಣೆದುರು ತಂದು, ನಮ್ಮ ಊಹಾ ಚಿತ್ರವನ್ನು ಅಂದಗೆಡಿಸುವ ವಿಧಾನ.

ನರ್ಸ್ :—ಈಕೆ ಕೈ ಹಿಡಿದರೆ, ನಮ್ಮ ಜ್ವರ ಜಾಸ್ತಿಯಾಗುತ್ತದೆ.

ಪಥ್ಯ :—ಎಲೆ ಮುಂದಿನ ಪೌರುಷ.

ಪಾರ್ಟಿ :—ನವ ಭಾರತದಲ್ಲಿ ಇದೇ ಊರು ಭಂಗದ ರೀತಿ.

ಬಿ.ಎ. :—ಈ ಪದವಿಯನ್ನು ಪಡೆದಿರುವವರ ಪೈಕಿ, ಶೇಕಡ ೭೫ ಮಂದಿ ಆಂಗ್ಲ ಅಕ್ಷರಮಾಲೆಯನ್ನು ಉದ್ದಕ್ಕೂ ಸಾಲಾಗಿ ಹೇಳುವ ಸಾಮರ್ಥ್ಯ ಪಡೆದಿರುವರಂತೆ.

ಬಳ್ಳಾರಿ :—ಪ್ರಾಂತ ಪುನರ್ವಿಂಗಡಣಾ ಫುಟ್‌ಬಾಲ್ ಆಟದಲ್ಲಿ, ಅಂಪೈರುಗಳೇ ಒದ್ದು ಆಡುವ ಚೆಂಡು.

ಬೊಜ್ಜು :—ಸೊಂಟ ಕಟ್ಟಿ ದುಡಿಯದಿದ್ದರೆ, ಆ ಸೊಂಟ ಯಾವ ಕಟ್ಟಿಗೂ ಒಳ ಪಡದೆ ಬೆಳೆಯುತ್ತದಂತೆ.

ಭಾಷಾವಾರ್ :—ಎಸ್ಸಾರ್ಸಿ ವರದಿಯ ಅನಂತರ.

ರೋಗಿ :—ಈತ ಮಲಗಿ ಹಾಡಲು, ನಾವು ಕುಳಿತು ಕೇಳುವೆವು.

—ಬಾರಾಂತ.

ವಿಚಿತ್ರ ಗುಂಪು

ಇದ್ದಕ್ಕಿದ್ದ ಹಾಗೆ ನಮ್ಮ ಡಬ್ಬಿಯೊಳಕ್ಕೆ ಭಾರಿ ತಂಡವೊಂದು ನುಗ್ಗಿತು. ಅಲ್ಲಲ್ಲಿ ಹುಡುಕಾಡಿ ಗಂಟುಮೂಟೆಗಳನ್ನಿಳಿಸಿ ವಿವಿಧ ಆಸನಗಳನ್ನು ಅಳವಡಿಸಿ ಕೊಂಡು ಕೂತಿತು. ಮೂರುನಾಲ್ಕು ವೃದ್ಧರು; ಎಂಟೊಂಬತ್ತು ಮಧ್ಯವಯಸ್ಕರು; ಮೂರುತರುಣರು. ಎಲ್ಲರೂ ಗಂಡಸರು. ಕುತೂಹಲ ತುಂಬಿದ ಮುಖಗಳು. ಆ ಪ್ರಾಂತ್ಯಕ್ಕೆ, ಆ ಪ್ರಮಾಣಕ್ಕೆ ಹೊಸಬರು. ಒಟ್ಟಾಗಿ ಎಲ್ಲಿಗೋ ತೀರ್ಥಪ್ರಸಾದ ಯಾತ್ರೆ ಹೊರಟಿರುವಂತೆ ಕಂಡಿತು.

ಕುಳಿತೊಡನೆಯೇ, ಮಾತಿಗೆ ಪ್ರಾರಂಭ. "ಆ ಮಾಲೆಯವನು ತೀರ ಮೋಸಗಾರ; ಮಾತುಕೊಟ್ಟಂತೆ ನಡೆಯಲೇ ಇಲ್ಲ" ಎಂದು ಗೊಣಗಿದರೊಬ್ಬರು. ಪುಣ್ಯಕ್ಷೇತ್ರಕ್ಕೆ ಹಾರಸಹಿತ ಹೊರಡುತ್ತಿದಾರೋ ಏನೊ, ಎಂದುಕೊಂಡೆ.

"ಮಾಲೆಯವನನ್ನು ಬೈದೇನು ಪ್ರಯೋಜನ; ಅವನಿಗೆ ಹಣ ಬರುವುದು ತಡ; ನಾವೂ ಅವನೊಂದಿಗೆ ಸಹಕರಿಸಬೇಕು" "ಅದುವರೆಗೆ ಹೆಂಡತಿ ಮಕ್ಕಳ ಗತಿಏನು?" "ಯಾರ? ಅವನದೋ, ನಮ್ಮದೋ?" "ನಮ್ಮ ಕಸಬಿನವರಿಗೇ ಮಕ್ಕಳು ಹೆಚ್ಚು!" ಈ ಮಾತುಗಳನ್ನು ಕೇಳಿದಾಗ, ನನಗೆ ಆಶ್ಚರ್ಯವಾಯಿತು. "ಮಾಲೆಯವನಿಗೆ ನೀವು ಹಣ ಕೊಡಬೇಕು, ಹಾಗಲ್ಲವೆ ನ್ಯಾಯ?" ಎಂದೆ ನಾವು. "ಹುಂ! ಹಾಗೂ ನಮ್ಮಲ್ಲಿ ಕೆಲವರು ಮಾಡುವುದುಂಟು; ತಮಗೆ ಕೀರ್ತಿ ಸಂಪಾದಿಸಿ ಕೊಡುವುದಕ್ಕಾಗಿ" ಎಂದರು ತರುಣರೊಬ್ಬರು. "ನಷ್ಟ ಬರುವ ಭಯವಿದ್ದರೆ ಆ ಮಾತುಸರಿ! ನಮ್ಮಿಂದ ಅವನಿಗೆ ಲಾಭ ಬರುತ್ತಿರುವಾಗ, ನಾವು ಹಣಕೊಡಿ ಅಂತ ಕೇಳುವುದೇತಪ್ಪೆ?" ಎಂದು ವಾದಿಸಿವರು, ಮತ್ತೊಬ್ಬರು. ಅವನಿಗೆ ಲಾಭ ಬರುವ ರೀತಿಯಲ್ಲೇ ನಾವು ಸೊಗಸಾದ ಹೊಲಸು ತುಂಬಿ ಅವನ ಕೈಗೆ ಕೊಡುತ್ತಿದೇ ವಲ್ಲಾ," ಎಂದು ರೇಗಿದರು, ಮಧ್ಯವಯಸ್ಕರು. "ಭಕ್ತಿ ಖರ್ಚಾಗುವಾಗ ಭಕ್ತಿ ವಿಷಯ! ದೇವರು ಖರ್ಚಾಗುವಾಗ, ದೇವರ ವಿಷಯ; ದೆವ್ವಕ್ಕೆ ಗಿರಾಕಿ ಇದ್ದರೆ, ದೆವ್ವದಕಥೆ, ಎಲ್ಲಕ್ಕೂನಾನು ಸಿದ್ಧ" ಎಂದರಿನ್ನೊಬ್ಬರು.

ನನಗೆ ಅರ್ಥವಾಗಲಿಲ್ಲ.. ತಲೆ ಕೆರೆದೆ; ಪ್ರಯೋಜನವಾಗಲಿಲ್ಲ. "ಗೀತೆ ಗಳನ್ನು ಕೇಳುವರೇ ಇಲ್ಲ, ಈಚೆಗೆ. ಸಾವಿರ ಖರ್ಚಾಗುವುದಕ್ಕೆ ನೂರುವರ್ಷ ಬೇಕಾಗುತ್ತದೋ ಏನೊ?" ಎಂದರು ಕಿರುಗಡ್ಡ ಸಹಿತದ ತರುಣರೊಬ್ಬರು, ತೇಲು ಗಣ್ಣು ಬೀರುತ್ತಾ.

ಯೊವಗೀತೆ? ಯಾರವ್ಯಾಖ್ಯಾನ? ಇವರಾರು? ದ್ವೈತಿಗಳೇ, ಅದ್ವೈತಿಗಳೇ? ಎಲ್ಲಿಗೆ ಹೋಗುತ್ತಿದ್ದಾರೆ? ಮಂತ್ರಾಲಯಕ್ಕೋ? ಹಂಪೆಯ ವಿರೂಪಾಕ್ಷನ ಗುಡಿಗೋ? ಸಂದೇಹದಲ್ಲಿ ಆಂದೋಲಿದೆ.

"ತಿಂಗಳಿಗೆ ಸಾವಿರ ರೂಪಾಯಿ ಪೆನ್‌ಷನ್ ಬರುವ ರಾಜಗೋಪಾಲಚಾರಿ ಕೂಡ ಹಳೆಯಕಥೆಗಳನ್ನು ಹೊಸದಾಗಿ ಹೇಳಹೊರಟರೆ, ನಮ್ಮ ಪಾಡೇನು?"

ನನಗೆ ನನ್ನಮೇಲೆ ಕೋಪ ಬಂತು. "ಎಲ್ಲಿಗಿರಿ ನೀವು?" ಎಂದು ಕೇಳಿದೆ. ಅವರು ಉತ್ತರ ಹೇಳಲಿಲ್ಲ. ಅವರ ಪ್ರಪಂಚವೇ ಅವರಿಗೆ ಪಂಚಾಮೃತ.

"ನೋಡಿ, ಆ ಬೆಟ್ಟ....ಸತ್ಯಾಗ್ರಹಕುಳಿತ ಹೊಟ್ಟೆಯಂತೆ ಕುಳಿತಿದೆ." ಎಂದು ವಿಚಿತ್ರಭಾಷೆ ಮಾತನಾಡಿದರೊಬ್ಬರು. "ಪುರಾಣಮಿತ್ಯೇವ ನ ಸಾಧುಸರ್ವಂ; ಜ್ಞಾಪಕ ಇರಲಿ, ಗೆಳೆಯ! ಹಳಬರೆಲ್ಲ ಸಾಧುಗಳಲ್ಲ" ಎಂಬ ಚೀತ್ಕಾರ ಮತ್ತೊಂದು ಮೂಲೆಯಿಂದ ಬಂತು. "ಶ್ಲೋಕ ಶೋಕದಿಂದ ಬಂದ ಹಾಗೆ, ಈಗ, ನಮ್ಮ ಶೋಕ ದಿಂದ ಒಂದು ಸ್ಲೋಗನ್ ಹೊರಡಲಿ, ನೋಡುವ" ಎಂದರು ಮತ್ತೊಬ್ಬರು.

ಎಂಥಜನ ಇವರು? ಏಕೆ ಹೀಗೆ ಮಾತನಾಡುತ್ತಿದ್ದಾರೆ....ಎಲ್ಲರಂತಲ್ಲ ವಲ್ಲಾ?, ಎಂದು ಕೊಂಡೆ. "ಇಲ್ಲಿ ನೋಡ್ರಿ! ೨೨ ಜನ ಕೂಡ್ರುವುದು ಅಂತ ಬರೆದಿದೆ. ಕೂಡ್ರು ಎಂದು ಮೊತ್ತಮೊದಲು ಬರೆದಿರುವುದು. ಅನೋಘ ವರ್ಷಅಲ್ಲ, ದಾವಣಗೆರೆಯ ಹತ್ತಿರದ ಗೌಡಗೆರೆ ಶಾಸನದಲ್ಲಿ...ಸಿಂಪಕವಿ ವಿರಚಿತ ಮಾರಣ್ಣಾ ಪ್ರಶಸ್ತಿಯಲ್ಲಿ...ಗುರ್ರ್ರದಮೇಲ್ ಕೂಡ್ರಿ ಸರ್ರನೆ ಪಾರಿದನ್ ಶೂರಮಾರಭೂಪಂ ಎಂದಿದೆ." ಎಂದು ಹೇಳುತ್ತ ಪಕ್ಕದವರ ಪಕ್ಕೆ ಚುಚ್ಚಿದರವರು .. ಎಂಥ ಖಾಯಿಲೆ ಈತನಿಗೆ, ಎಂದು ನಾನು ಮೂಗಿನ ಮೇಲಕ್ಕೆ ಬೆರಳೇರಿಸಿದೆ.

ಆಗ, ಅವರಲ್ಲೊಬ್ಬರು, "ಕೇಳಿರಿ ಇಲ್ಲಿ, ಬೇಗ, ನನಗೊಂದು ಮಹೋಪಮೆ ಹೊಳೆಯಿತು ಬರೆದುಕೊಳ್ಳಿ. ಯಾವಾಗಲಾದರೂ ಉಪಯೋಗಕ್ಕೆ ಬರುತ್ತೆ.... ಚುಂಚಿನಗಿರಿಯ ಸಂತೆಗೆಂದು ಪೋದರಿಬ್ಬರು ರೈತಯೋಗಿಗಳಲ್ಲಿ ತಡಕಾಡುತ್ತ ದನಗಳನೊಂದೊಂದಾಗಿ ಬಾಯಿಬಿಡಿಸಿ ಹಲ್ಲೆಣಿಸಿ ಅವರಲೊಬ್ಬ ತಂದನೆತ್ತೆರಡ.... ಒಂದೆತ್ತು ಬಂದಿತ್ತು. ಕೊಡಗಿನಂಚಿನ ಹಸುರು ಹಾಸಿಗೆ ನೀಲಿ ಕಂಬಳಿ ಹಳದಿ ಬಿಸಿಲಿನ ಹಳ್ಳಿಯೊಂದರಿಂದ, ಮತ್ತೊಂದೆತ್ತು ನಡೆದು ಬಂದಿತ್ತು ಪ್ರಖ್ಯಾತ ಮಕರ ಧ್ವಜನಗ್ರಾಮ ಮಣಿಪುರದಾಚೆಗಿನ ಪಳೇಪತ್ತನ ವೊಂದರಿಂದ... ಆದರೂ, ಆ ಎರಡು ಪ್ರಾಣಿಗಳು ಮಹಿಶೂರ ಪುರದಾಚೆ ಆರು ಮೈಲೀಚೆಯಲಿ ಬಡಗಿ ಬೆಡಗಿದ ಬಂಡಿಯೊಂದನೆಳೆದು ಸಾಗಿಸಿತು. ನೇಗಿಲ ಮುನಿಗಳಾವೇಶದಿಂ ಬೆಳೆದೊಡ್ಲು ಶೆಂಗಾ ರಾಗಿ ಚೀಲಗಳ ಪೇಟೆ ಕೋಟೆಗಳಿಗೆ... ಒಂದುಕರಿ, ಒಂದುಬಿಳಿ, ಮತ್ತೊಂದು ನಿರ್ಜೀವ ಬಂಡಿ, ಆದರೂ ಅವು ಮೂರು ಚಾವಟಿ ಬಡಿತಕ್ಕೆ ಮುಮ್ಮುಂದೆ ಸಾಗುತ್ತ ಪಂಚವಾರ್ಷಿಕ ಯೋಜನೆಯ ನೆರವೇರಿಸುತ......"

"ಸಾಕಪ್ಪ, ನಿನ್ನ ನೆಯ್ಗೆ ಕೆಲಸ! ಅಂತೆಯೇ, ಈ ವೀಳ್ಯ, ಈ ಅಡಿಕೆ, ಈ ಸುಣ್ಣ, ... ಮೂರು ವಸ್ತುಗಳೀಗ ನನ್ನ ಬಾಯೊಳಗೆ ಜಗಿ ಜಗೀ......."

ಅವರೆಲ್ಲರೂ ಗಹಗಹಿಸಿ ನಕ್ಕರು ಉಳಿದ ನಮ್ಮವರ ಕಣ್ಣಲ್ಲಿ ನೀರು ಬಂತು. "ಪಾಪ, ಪಾಪ!.... ಬುದ್ಧಿ ತಮ್ಮ ಸ್ತಿಮಿತದಲ್ಲಿಲ್ಲದಿದ್ದರೆ, ನಾವೂ ಹೀಗೆಯೇ ಪ್ರಲಾಪ ಮಾಡುವೆವು, ಅಲ್ಲವೆ?," ಎಂದು ನನ್ನ ಬಲಗಡೆ ಕುಳಿತಿದ್ದ ಸಾಹುಕಾರರು ನನ್ನನ್ನು ಪ್ರಶ್ನಿಸಿದರು.

"ಯಾವುದು, ರೀ? ನಿಮ್ಮ ಗುಂಪು? ಎಲ್ಲಿಗೆ ಹೊರಟಿದೀರಿ?" ಎಂದು ಮತ್ತೆ ಕೇಳಿದೆ. ನನ್ನ ಪ್ರಶ್ನೆಯನ್ನು ಆ ಪೈಕಿ ಒಬ್ಬರು ಅರ್ಥಮಾಡಿಕೊಂಡರು. ಉತ್ತರವನ್ನೂ ದಯಪಾಲಿಸಿದರು.

"ಗೊತ್ತಾಗಿಲ್ಲವೇನ್ರಿ, ಇನ್ನೂ? ನಾವು ಸಾಹಿತಿಗಳು ...ಸುಪ್ರಸಿದ್ಧ ಸಾಹಿತಿಗಳು........ ರಾಯಚೂರಿಗೆ ಹೋಗುತ್ತಿದೇವೆ.... ಸಮ್ಮೇಳನಕ್ಕಾಗಿ" ಎಂದರು. ಕೈಯಲ್ಲಿದ್ದ ಟಿಕೀಟ್ ತೋರಿಸಿದರು.

"ದೇವರೇ ಕಾಪಾಡಬೇಕು, ನಿಮ್ಮನ್ನೂ.... ನಮ್ಮನ್ನೂ," ಎಂದು ನಾನು ಕಿಟಕಿ ಯಾಚೆ ತಲೆನೀಡಿ, ಶುದ್ಧವಾದ ಗಾಳಿ ಸೇವಿಸಿದೆ.

—ಪಾಟೀಲ.

ಹಾದಿಯಲ್ಲಿ ಕೇಳಿಸಿದುದು—

ಈ ನಡುವೆ ನೋಡ್ರೀ—ಈ ಎರಡು ಕರ್ಣಾಟಕ, ಅಲ್ಪ ಸಂಖ್ಯಾತರ ಪರದಾಟ, ಬಹು ಸಂಖ್ಯಾತರ ಗಧಾಯುದ್ಧ—ನೋಡೀ ನೋಡೀ—ಈ ದೇಶಾ ಬಿಟ್ಟು ಪಾಕಿಸ್ಥಾನಕ್ಕೋ ಅಥವಾ ಸೌತಾಫ್ರಿಕಕ್ಕೋ ಹೊರಟ್ಹೋಗಲೇ ಅನ್ನಿಸುತ್ತೆ!"

ವೈದ್ಯರಲ್ಲಿ ವಿಷನಿಮಿಷಗಳು—

ನೋಡೀ ಡಾಕ್ಟ್ರೇ—ನೀವು ಹೇಳಿದ ಹಾಗೇನೇ ಮೂರು ಟನ್ನು ಗ್ಲಾಸ್ಕೋ ಕೊಟ್ಟೆ. ಇನ್ನೂ ನಮ್ಮ ಹುಡುಗ ಥಪ್ಪನಾಗಲೇ ಇಲ್ಲ. ಬರೇ ಸ್ಕಿನ್ನು, ಬೋನು—ಮಟ್ಟನ್ನೇ ಇಲ್ಲ ಬಾಡೀಲಿ. ಅಲ್ಲ ಡಾಕ್ಟ್ರೇ—ಒಂದೆರಡು ಪೆನ್ಸಿಲ್ ಕೊಟ್ರೆ ಬಾಡೀಲಿ ಮಟ್ಟನ್ ಹೆಚ್ಚೊಲ್ವೇ?"

—"ಶೇಷ"

ಚೋರ

ಸ್ನೇಹಿತರ ಮನೆಗಳಿಗೆ, ಪರಿಚಿತರ ಬಂಗಲಿಗೆ
ದೇಹವಿದ ಹೊತ್ತುನಾ ದಿನವು ತಿರುಗಿ
ಮೋಹ ಜಾಲಗಳಿಂದ ಮೋಸ ಗೈದವರನ್ನು
ಆಹ! ಬಹು ಬುಕ್ಕುಗಳ ಹೊಡೆದು ತರುವೆ.

ಕಿರುನಗೆಯ ಬೀರುತ್ತ ಬೀರು ಬಾಗಿಲ ಸರಿಸಿ
ಒಂದೊಂದೊ ಎರಡೆರಡೊ ಹೊರಗೆಳೆದು, ಕೊಂಕುಳಲಿ
ಹಿಂದುಮುಂದಾಗಿರಿಸಿ, ಹೊಸಲದಾಟುವೆ, ನಾನು;
ನಾಚಿಕೆಯೆ ಇಲ್ಲೆನಗೆ! ಚೋರನಾನು.

"ಅವಳಿಗಿದು ಬೇಕಂತೆ!" "ಮಗಳಿಗೀತನಮೇಲೆ
ಬಲು ಮೋಹ, ಕೊಡಿರಿದನು, ನಾಳೆ ತರುವೆ"
"ಅಳಿಯನಿಗೆ" "ಒಂದೆ ದಿನ"–ಕುಂಟುನೆಪಹೂಡಿ
ಹೊಲಸು ಹೊಸದೆಲ್ಲವನು ದೋಚಿ ತರುವೆ

ಪಂಪ ಜನ್ನಾದಿಗಳೊ ನಾಕ ನರಸಿಂಹರದೊ
ಶ್ರೀ ಬರೆದ ಕವನಗಳೊ ಕುಲಕರ್ಣಿ ಗೋಕಾ—
ಕಾನಕೃತನಾವಲೊ, ಎಂಥದಾದರೂ ಇರಲಿ
ನಾಟಕವೊ ಕೀಟಕವೊ, ಕದ್ದು ತರುವೆ

ರಾಶಿ ಸೀಕೇವಿಗಳ ರಾಶಿ ಇದೆ, ನನ್ನಲ್ಲಿ;
ವೀಸಿ ಕೂವೆಂಪುಗಳನುಳಿಸಿಲ್ಲ ನಾನು;
ರಾಜರತ್ನಂಗಳನು ಹಲವಾರು ಹಾರಿಸಿಹೆ,
ಕಣವೆ ಶಂಕರಭಟ್ಟ ಪಂಜೆ ಶ್ರೀರಂಗ.

ಡೀವೀಜಿ ತಾರಾಸು—ಷಣ್ಮುಖಯ್ಯನೆ ಇರಲಿ–
ಅರ್ಚಕನೊ ಚರ್ಚಕನೊ ನಾಡಿಗಾ ಬೀಡಿಗಾ
ಅರವಿಂದ ಕಂದ ಮೇಣ್—ಆರಯ್ಯನಾದರೂ—
ಪುಸ್ತಕವು ಸಾಕೆನಗೆ! ಒಳಗಿನದ ಕೇಳೆ.

"ಹೊತ್ತಗೆ ಹಣ ಹೆಣ್ಣು ಈ ಮೂರು ವಸ್ತುಗಳು
ಪರಹಸ್ತಗತವಾದ ರವುಗಳನು ನೆನೆದು
ಚಿಂತೆ ಗೈಯ್ಯಲು ಬೇಡ," ಎಂಬ ನಾಣ್ಣುಡಿಯನ್ನೆ
ಬೀರು ಬಾಗಿಲಮೇಲೆ, ಬರೆದಿರುವೆ ನಾನು.

ನಾ. ಕ.

ಅಪರಂಜಿ ವಚನಗಳು

ಆ ಸೇತು ಹಿಮಾಚಲವನೊಂದಾಗಿ ಮಾಡಿದವರಾರಯ್ಯ? ಅದೇಕಯ್ಯ? ಒಂದರಲಿ ಹತ್ತಾಗಿ, ಹತ್ತರಲಿ ಮುತ್ತಾಗಿ, ಕನ್ನಡವ ನುಡಿಸಿದವರಾರಯ್ಯ? ಅದೇಕಯ್ಯ? ಕಡಲಾಚೆ ಬಿಳಿಯರನು ಕಡಿಯದೆಯೆ ಪಡುವಲಿಡೆ ಪೊರಮಡಿಸಿ ಕರಿಯರನೇ ಡಿಲ್ಲಿಯಲಿ ಕುಳ್ಳಿರಿಸಿದವರಾರಯ್ಯ? ಅದೇಕಯ್ಯ? ಐಸಿರಿಯು ಮೈಸೂರಿನಾಚೆಯೂ ಆ ಕನ್ನಡವ ಕೋಟಿ ಮನುಜರ ಮನೆಮಾತಾಗಿ ಮಾಡಿದವರಾರಯ್ಯ? ಅದೇಕಯ್ಯ? ಹೊಸಲಾಚೆ ನಿಲ್ಲಿಸಿದ ಬಂಧುಬಳಗದ ತಂಡ ತಮ್ಮ ತಮ್ಮಾ ಎನುತ ಹೊಸಲೀಚೆ ಬಂದಾಗ, ಪರರಂತೆ, ಹೊರಗಡೆಯೆ ಕುಳಿತುಕೊಳಿ, ಬಿಳಿಯ ಬಿಗಿದಾ ಬೇಲಿ ಭದ್ರವಾಗೇ ಇರಲಿ, ಎಂದೆನುವರಾರಯ್ಯ, ಅದೇಕಯ್ಯ? ಕೇಳಿದಳು ನಮ್ಮ ಕೊರವಂಜಿಯು ಕಾಯುವ ಪರಂಜಿದೇವಿ.

ಸುಳ್ಳಿಲ್ಲದ ನಡತೆ, ಮುಳ್ಳಿಲ್ಲದ ನುಡಿತ, ಕಳ್ಳಿಲ್ಲದ ಕುಡಿತ, ಟೊಳ್ಳಿಲ್ಲದ ದುಡಿತದಿಂದಾಗಿ, ಎಳ್ಳಿಲ್ಲದ ಗಾಣವನಾಡಿದ ಎತ್ತಿನಂತಾಯಿತೋ, ಎನ್ನ ರಾಜಕೀಯ! ಪೊಳ್ಳುದುಂಡಾಳುಗಳ ಕುಳ್ಳು ಮುಂದಾಳುಗಳ ಹಿಂದೆ ಸಿಳ್ಳು ಹೊಡೆಯದೆ ನಾನು, ಬಲ್ಲಾಳನಾದರೂ, ಹಳ್ಳದಲ್ಲಿ ಬಿದ್ದ ದಳ್ಳಾಳನಾದೆನೋ, ಎನ್ನ ರಾಜಕೀಯದಿಂದ! ಕಳ್ಳ, ನೀ ಜೊಳ್ಳಿಗೇ ಕೈಯೊಡ್ಡುವೆಯಾ, ಹಳ್ಳಿಗೇ ಹಿಂತಿರುಗು, ಎದಂಳೆನಗೆ ಕೊರವಂಜಿಯ ಕಾಯುವ ಪರಂಜಿದೇವಿ.

ಹಿಡಿ ಎಂದರೆ ಮಡಿ ಎಂಬೆಯಾ? ಮರುಳೆ! ಬಿಡಿ ಎಂದರೆ ಬಡಿ ಎಂಬೆಯಾ? ಮರುಳೆ? ಹಾಡೆಂದರೆ ಓಡೆಂಬೆಯಾ? ಮೂಡೆಂದರೆ ಜೋಡೆಂಬೆಯಾ? ಮರಳೆ! ಕೂಡೆಂದರೆ, ಬೇಡೆಂದದ ಕೇಡೆಂಬೆಯಾ, ನಾನುಗೂಡಿಗೇ ದೌಡೆಂಬೆಯಾ? ಮರುಳೆ! ಸೇಡನ್ನು ದೂಡೆಂದಳು, ಕೊರವಂಜಿಯ ಕಾಯುವ ಪರಂಜಿದೇವಿ.

ರಾಜನ ಉಪನ್ಯಾಸ

ವೀರಭದ್ರೂ್ರವಿನ ಉಪಚಾರದಿಂದ ನಾನು, ರಾಜ, ಚಂದಿ ತಪ್ಪಿಸಿಕೊಂಡು ಹೊರಟು ನೆಟ್ಟೂರು ಮುಟ್ಟಿದೆವು. ಮಧ್ಯಾಹ್ನವಾಗಿತ್ತು.

"ಏನ್ರೋ – ನಾವು ನಿಜವಾಗಿ ತಲಕಾಡು ಯಾತ್ರೆ ಪೂರೈಸುತ್ತೇವೇನ್ರೋ?" ಅಂದ ರಾಜ.

"ಚಂದೀ ಸ್ವಲ್ಪ ಮನಸ್ಸುಮಾಡಿ ಆ ಕಡೆ ಈ ಕಡೆ ನಮ್ಮನ್ನ ಎಳೀದಿದ್ರೆ ಏಕಾಗೊಲ್ಲ?" ಅಂದೆ ನಾನು.

ಚಂದಿಗೆ ರೇಗಿತು.

"ನಂದೇನೂ ತಪ್ಪಿಲ್ಲ. ರಾಜನಿಂದಲೇ ನಮಗೆ ಇಷ್ಟು ತಾಪತ್ರಯ. ಕಿರಲು ಕೋಡಿನಲ್ಲಿ ಎಷ್ಟು ಅವಸ್ಥೆಮಾಡಿದ್ದ ನೋಡು!" ಅಂದ.

ಇದನ್ನು ನಾನೊಪ್ಪಿದೆ. ಹೌದು – ರಾಜನೂ ಕೂಡ ಒಂದೊಂದುಬಾರಿ ತಪ್ಪಿದ್ದಾನೆ – ಆದರೂ ...

"ಹೋಗಯ್ಯಾ–ನಾನೇನು ಕೇಫನಿಗಿಂತ ಕೀಳೇನಲ್ಲ. ನಾವಿಬ್ಬರೂ ಇವನನ್ನ ಲೀಡರ್ ಆಗಿ ನೇಮಿಸಿಕೊಂಡಿದ್ದು ನಮ್ಮ ತಪ್ಪು. ನಾವು ಕೆಟ್ಟೆವು" ಅಂದ ರಾಜ.

"ಅದು ನಂಗೆ ಹೊರಡುಕ್ಕೆ ಮುಂಚೆಯೇ ಗೊತ್ತಿತ್ತು" ಅಂದ ಚಂದಿ.

ಪುನಹ ನಾನು ಈ ಪ್ರಸ್ತಾಪ ಮುಂದುವರಿಸಲಿಲ್ಲ.

ನೆಟ್ಟೂರು ಭಟ್ಟರ ಹೋಟೆಲಿನಲ್ಲಿ ಹೊಟ್ಟೆ ತುಂಬಿಸಿಕೊಂಡು ನಮ್ಮ ಪ್ರಯಾಣ ಮುಂದುವರಿಸಲು ಹವಣಿಸಿಕೊಂಡೆವು. ನಾವು ಹೋಟೆಲಿನ ಮುಂಬಾಗಿಲನ್ನು ದಾಟಿ ಹಾದಿಗೆ ಕಾಲಿಟ್ಟು ನಮ್ಮ ವಾಹನಗಳಿಗೆ ಕೈಹಾಕಿದ್ದೆವು. ಆಗ ನಮ್ಮ ಮುಂದೆ ಒಂದು ಬಾಲಕಿಯರ ಗುಂಪು ಹೊರಟಿತ್ತು. ಸುಮಾರು ಬಾಲಕಿಯರ ಸಂಖ್ಯೆ ೨೫ – ೩೦ ಇರಬೇಕು. ಆ ಗುಂಪಿನ ಮೇಲ್ವಿಚಾರಣೆಯಲ್ಲಿ ಮೇಡಮ್‌ಗಳಹಾಗೆ ಇಬ್ಬರು ಬಲಿತ ಬಾಲಕಿಯರೂ ಇದ್ದರು. ನಾನು ಯಾವುದೋ ಶಾಲೆಯ ದಿನಾಚರಣೆ ಇರಬೇಕೆಂದು ಗುಂಪಿನ ಬಗ್ಗೆ ಅಷ್ಟೇನು ಗಮನಕೊಡಲಿಲ್ಲ. ಆದರೆ ಚಂದಿ ಸುಮ್ಮನಿರಲಾರ....

"ಇದೇನು–ನೆಟ್ಟೂರು ಜೂಗೆ ಪರ್ಶೆ ಹೊರಟಿದ್ದೀರಾ?" ಅಂತ ಆ ಮೇಡಮ್ ಒಬ್ಬರನ್ನ ಕೇಳಿಯೇ ಕೇಳಿದ.

ಆಕೆಗೆ ಕೋಪ ಬಂದಿರಬೇಕು. ಬರದೆ ಏನು? ನಾನಾಗಿದ್ದಿದ್ದರೆ ಚಂದಿಯ ಕೆನ್ನೆಗೆ ಎರಡು ಬಾರಿಸುತ್ತಿದ್ದೆ. ನನ್ನಾಕೆಯಾಗಿದ್ದಿದ್ದರೆ ಚಂದಿಯು ಕೆನ್ನೆಗೂ... .... ಹೋಗಲಿಬಿಡಿ. ಅಂತೂ ಮೇಡಮ್ ಅವರಿಗೆ ಕೋಪ ಬಂತು.

"ತಾವು ಆ ಸ್ಥಳದಿಂದಲೇ ಬಂದಿರಬೇಕು. ನಾವು ಈಗ ಸಮಾಜ ಕಲ್ಯಾಣ ಕೇಂದ್ರ ಪ್ರಾರಂಭ ಸಮಾರಂಭಕ್ಕೆ ಹೊರಟಿದ್ದೇವೆ" ಅಂದರು.

ಚಂದಿ ಬೆಪ್ಪನಹಾಗೆ ನಿಂತೇ ಇದ್ದ.

"ತಾವೂ ಬರಬಹುದು" ಅಂತ ಸೇರಿಸಿ ಆಕೆ ಬಾಲಕಿಯರ ಗುಂಪನ್ನು ಅಟ್ಟುತ್ತ ಹೊರಟರು.

ನಮ್ಮ ವಾಹನಗಳನ್ನು ಅಲ್ಲಿಯೇ ಬಿಟ್ಟು ಸಮಾಜ ಕಲ್ಯಾಣ ಕೇಂದ್ರ ಪ್ರಾರಂಭ ಸಮಾರಂಭಕ್ಕೆ ಹೊರಟೆವು.

ನಮಗೆ ಸ್ವಾತಂತ್ರ್ಯ ಬಂದಮೇಲೆ ದೇಶಾದ್ಯಂತ ನಮ್ಮ ಸಮಾಜ ಸುಧಾರಣೆಯ ಉತ್ಸವಗಳು ಹೆಚ್ಚಿವೆ. ನಾವೂ ಈ ನಮ್ಮ ತಲಕಾಡು ಯಾತ್ರೆಯಲ್ಲೇ ಈ ಉತ್ಸವ ಗಳಲ್ಲಿ ಸಿಕ್ಕಿ ಭಾಗವಹಿಸಿದ್ದೇವೆ. ಹಾಗಾಗಿ ಈ ನೆಟ್ಟೂರು ಸಮಾರಂಭವನ್ನೂ ನೋಡಿಕೊಂಡೇ ಹೋಗುವ – ಎಂಬ ಕುತೂಹಲದಿಂದ ನುಗ್ಗಿದೆವು.

ಸಮಾರಂಭವು ನೆರೆದಿದ್ದುದು ನೆಟ್ಟೂರು ಶಾಲೆಯಲ್ಲಿ. ಊರಿನವರೆಲ್ಲಾ ನೆರೆದಿದ್ದರು – ನೆಟ್ಟೂರು ಹೋಟೆಲು ಭಟ್ಟರನ್ನು ಬಿಟ್ಟು. ಮೊದಲು ಯಥಾಪ್ರಕಾರ ಇಬ್ಬರು ಕುಮಾರಿಗಳಿಂದ ಪ್ರಾರ್ಥನೆಯಾಯ್ತು. ಆಮೇಲೆ ಭಾಷಣಗಳು – ನಮ್ಮ ಸ್ವಾತಂತ್ರ್ಯದ ಕಥೆ, ನಮ್ಮ ದೇಶದ ಹಿರಿಮೆ, ನಮ್ಮ ನಾಯಕರ ದೇಶತ್ಯಾಗ— ಅಯ್ಯೋ – ದೇಶಕ್ಕಾಗಿ ತ್ಯಾಗ, ನಮ್ಮ ಜನರಲ್ಲಿರುವ ಮೂಢತ್ವ, ಆ ಮೂಢತ್ವವನ್ನು ನಿವಾರಿಸಬೇಕಾದ ನಮ್ಮ ಕರ್ತವ್ಯ – ಇವುಗಳ ಬಗ್ಗೆ ಭಾಷಣಗಳಾದುವು. ಭಾಷಣ ಗಳೆಲ್ಲಾ ಮುಗಿದಮೇಲೆ, ನಮ್ಮ ಕೈಗಳಿನ್ನೂ ಕರತಾಡನಗಳಿಂದ ಚೇತರಿಸಿಕೊಳ್ಳುವ ಮೊದಲೇ, ಉತ್ಸವದ ಕಾರ್ಯಕ್ರಮದ ಅಂಗವಾಗಿ ಶಾಲಾ ಬಾಲಕಿಯರಿಂದ ನಾಟ್ಯ ವಾಯ್ತು. ಆ ನಾಟ್ಯವೂ ನಮ್ಮ ಸಮಾಜದ ಉದ್ಧಾರಕ್ಕಾಗಿ ನೇಮಿಸಲ್ಪಟ್ಟ ಒಂದು ಕಾರ್ಯಕ್ರಮವೆಂದು ತಿಳಿಯಿತು. ನಾಟ್ಯದ ಧಾಳಿಯಿಂದೆದ್ದ ಧೂಳಿನ್ನೂ ಆರುವುದ ರೊಳಗಾಗಿ ನಾವು ನೆಟ್ಟೂರು ಬಿಟ್ಟೆವು.

"ಏನ್ರೋ–ನಾವೂ ಸುಮ್ಮನೆ ಹೀಗೆ ಪೋಲಿ ಅಲೆದು ಕಾಲ ಕಳೆಯುವುದಕ್ಕಿಂತ ಏಕ್ರೋ ಹೀಗೆ ಯಾವುದಾದರೊಂದು ಯೋಜನೆಯಲ್ಲಿ ಕಸುಬು ಗಳಿಸಬಾರದು?" ಅಂದ ಚಂದಿ.

ಅದಕ್ಕೆ ರಾಜ "ಓಹೋ – ಧಾರಾಳವಾಗಿ. ಆದರೆ ಕೊಡುವವರೊಬ್ಬರಿಲ್ಲ. ಹಾಗೂ ನಾವು ಯಾವ ಕಸುಬಿಗಾದರೂ 'ಫಿಟ್ಟಾ'ಗಿದ್ದರಲ್ಲವೆ?" ಅಂತ ಕೇಳಿದ.

"FITTU? ಯಾರ್‍ಯಾರು ಯಾವ್ಯಾವ ಕೆಲಸಕ್ಕೆ ಫಿಟ್ಟಾಗಿದ್ದಾರೆ ಹೇಳು?" ಅಂದ ಚಂದಿ.

ಅದಕ್ಕೆ ರಾಜ ಶುರುಮಾಡಿದ.

"ಈಗ ನೋಡಿ – ಒಂದು ಹಳ್ಳೀಲಿ ಒಂದೇ ವರ್ಷದಲ್ಲಿ, ವಯಸ್ಕರ ಶಿಕ್ಷಣ, ಸಂಸ್ಕೃತಿಪ್ರಸಾರ, ವನಮಹೋತ್ಸವ, ಭೂದಾನ, ವಿದ್ಯಾದಾನ, ಸಮಾಜ ಕಲ್ಯಾಣ, ಹೀಗೆ ಉತ್ಸವಗಳು ಮೇಲಿಂದಮೇಲೆ ಟ್ಯೂರಿಂಗ್ ಟಾಕೀಸುಗಳಹಾಗೆ ಧಾಳಿ ನಡೆಸಿದರೆ – ಪಾಪ – ಹಳ್ಳಿಯವನ ಪಾಡೇನು? ವಿಜ್ಞಾನಕ್ಕೆ ಬದಲು ಅಜೀರ್ಣ ಹೆಚ್ಚಾಗಿ ಆತ ಎಲ್ಲವನ್ನೂ ವಾಕರಿಸುಕ್ಕೆ ಶುರುಮಾಡ್ತಾನೆ. ಇವುಗಳೆಲ್ಲವುಗಳಮೇಲೆ ನಮ್ಮ ರಾಜಕಾರಣಿಗಳು-ಪ್ರಜಾರಾಜ್ಯ-ಸಮತಾವಾದ, ಎರಡು ಕರ್ನಾಟಕ, ಜಮೀನ್‌ದಾರಿ ರದ್ದು – ಇವುಗಳನ್ನೆಲ್ಲಾ ಆತನಮೇಲೆ ಧಾಳಿಸಿದರೆ – ಆತ ಹಳ್ಳಿ ಬಿಟ್ಟು ಸನ್ಯಾಸಿಯಾಗಿ ಪರಶುರಾಮಕ್ಷೇತ್ರ ಹುಡುಕುತ್ತ ಹೊರಟಾನು!" ಅಂದ.

ನನಗೆ ರಾಜನ ವಾದ ಸರಿಬೀಳಲಿಲ್ಲ. ನಮ್ಮ ನಾಡಿನ ನಾನಾ ಯೋಜನೆಗಳನ್ನೆಲ್ಲಾ ಒಂದೇಬಾರಿಗೆ ಹಿಯ್ಯಾಳಿಸುವುದು ನನಗೆ ಸರಿತೋರಲಿಲ್ಲ.

"ಹಾಗಿದ್ದರೇನು – ನಮ್ಮ ನಾಯಕರಿಗೆ ಬುದ್ಧಿಯಿಲ್ಲವೇ?" ಅಂತ ಕೇಳಿದೆ.

ಅದಕ್ಕೆ ರಾಜ ಮತ್ತೊಂದು ಉಪನ್ಯಾಸ ಕೊಟ್ಟ.

"ಇದೆ – ಬುದ್ಧಿ ಇದೆ. ಆದರೆ ಬುದ್ಧಿಯಮೇಲೆ ಹತೋಟಿ ಕಡಿಮೆ ಅಷ್ಟೆ. ಒಂದು ದೊಡ್ಡ ದೊಂಬೆಗೆ ಒಂದೇ ಒಂದು ದೊಡ್ಡ ತೂತಿನ ಜೊತೆಗೆ ನೂರಾರು ಸಣ್ಣಪುಟ್ಟ ತೂತಿರಲಿ, ಆದರೆ ನಾವು ಮೊದಲು ಆ ದೊಡ್ಡ ಒಂದು ತೂತನಲ್ಲವೆ ಮುಚ್ಚಬೇಕು? ಅದರಿಂದಲೇ ದೊಂಬೆಯಿಂದ ನಷ್ಟ ಎಷ್ಟೋ ಕಡಿಮೆಯಾದೀತು. ಅದಕ್ಕೆ ಬದಲು ಆ ನೂರಾರು ಸಣ್ಣಪುಟ್ಟ ತೂತುಗಳನ್ನೇ ಮುಚ್ಚುಕ್ಕೆ ಶುರುಮಾಡಿದರೆ ಪೂರ್ತಿ ರಿಪೇರಿಯಾಗುವ ಹೊತ್ತಿಗೆ ದೊಂಬೆಯೇ ನೂರಾರು ಚೂರಾದೀತು. ಈಗ ನೋಡಿ – –ನಮ್ಮ ದೇಶದಲ್ಲಿ ನಾನಾ ಯೋಜನೆಗಳು ಶುರುವಾಗಿವೆ. ಹೊರದೇಶದವರೆಲ್ಲಾ ನಮ್ಮನ್ನು ಹೊಗಳುತ್ತಿದ್ದಾರೆ ಆದರೆ ಆ ಯೋಜನೆಗಳಲ್ಲಿ ಕೆಲವು ಅತೀ ಮುಖ್ಯವಾದುವುಗಳನ್ನು ಪೂರೈಸಲು ಸಾಕಷ್ಟು ಹಣವಿಲ್ಲವೆನ್ನುತ್ತಾರೆ. ಹಾಗಿದ್ದ ಮೇಲೆ ಈ ಸಣ್ಣಪುಟ್ಟ ಸುಧಾರಣೆಗಳನ್ನು ತುಸ ತಳ್ಳಿಹಾಕಬಾರದೇಕೆ? ನನ್ನ ಮಟ್ಟಿಗೆ ಹೇಳುವುದಾದರೆ ನಮ್ಮ ಜನಕ್ಕೆ ಈಗ ಅತೀ ಮುಖ್ಯವಾಗಿ ಬೇಕಾದುದು—ಅನ್ನ, ಬಟ್ಟೆ ಬಿಟ್ಟು—ವಿದ್ಯೆ, ಆರೋಗ್ಯ, ನಡತೆ. ಈ ಮೂರು ಅಂಶಗಳನ್ನೂ ನಮ್ಮ ದೇಶದ ವಿದ್ಯಾ ಇಲಾಖೆ, ಆರೋಗ್ಯ ವೈದ್ಯಕೀಯ ಇಲಾಖೆಗಳು ಕೈಕೊಂಡು ಸುಧಾರಿಸಬಹುದು ಆ ಇಲಾಖೆಗಳಿಗೆ ತುಸ ಹುಮ್ಮಸ್ಸು ಹೆಚ್ಚಿಸಿ ಸಮಾಜವನ್ನು ಬದಲಾಯಿಸಬಹುದು. ಇದರಿಂದ ಬೇರೆ ಬೇರೆಯವರನ್ನು ಆ ಕೆಲಸಗಳಿಗೆ ತರಬೇತು

ಮಾಡಿಸುವ ಖರ್ಚು, ಅವರ ಮೇಲಿನ ವಿಚಾರಣೆ ಹತ್ತೋಟಿಗಳ ಖರ್ಚು, ಮತ್ತು ಅವರಿಂದ ಆಗುವ ನಷ್ಟ—ಇವೆಲ್ಲಾ ಉಳಿಯುವುದಿಲ್ಲವೆ?" ಅಂದ.

ನನಗೆ ನಿರ್ಧರವಾಯ್ತು! ರಾಜ ಈ ನಡುವೆ ಎಲ್ಲೋ ಒಂದು ದುರಭ್ಯಾಸಕ್ಕೆ ಬಿದ್ದಿದ್ದಾನೆ. ಏನೋ, ಎಲ್ಲೋ ಓದುತ್ತಿದ್ದಾನೆ. ಅದೂ ಸಾಲದೆ—ಓದಿದ್ದೆಲ್ಲಾ ಅರ್ಥಮಾಡಿಕೊಂಡು—ಉಪನ್ಯಾಸದ ಜಾಡ್ಯ ಅಂಟಿಸಿಕೊಂಡಿದ್ದಾನೆ. ಇಲ್ಲದಿದ್ದರೆ ಈ ರೀತಿ ನಮ್ಮ ಯೋಜನೆಗಳನ್ನ ಏಕಾಪೋಶನ ತೆಗೆದುಕೊಳ್ಳುವನಂಥವನಲ್ಲ—ರಾಜ!

" ಈಗ ನೋಡ್ರೊ ......" ಅಂತ ಶುರು ಮಾಡಿದ ಪುನಃ.

"ಅಯ್ಯೊ ರಾಜ-ನಿನ್ನ ಉಪನ್ಯಾಸವನ್ನು ಮುಕ್ತಾಯ ಮಾಡುವಂಥಾವನಾಗು! Idiot! ಈ ನಿನ್ನ ತಲೆ ಹರಟೆಯನ್ನು ಇಲ್ಲಿ—ಅಂದರೆ ನೆಟ್ಟೂರು ತಲಕಾಡು ರಸ್ತೆಯಲ್ಲಿ ಕಿರುಲುತ್ತ ಹೋದರೆ ಈ ಸಾಲು ಮರಗಳು ನಮ್ಮ ಮೇಲೆ ಬಿದ್ದಾವು! ನಿನಗಾಗಿ, ಮುಂದಿನ ಹಳ್ಳಿಗೆ ಹೋಗಿ ಅಲ್ಲಿ ಒಂದು ಗದ್ದುಗೆ ಕಟ್ಟುತ್ತೇನೆ. ಅದರ ಮೇಲೆ ನಿಂತು ಎಷ್ಟು ಹೊತ್ತಾದರೂ ಕಿರುಲು. ನನಗೆ ಎಚ್ಚರವಾದ ಮೇಲೆ ನಾವು ಯಾತ್ರೆ ಬೆಳೆಸೋಣ" ಅಂದ ಚಂದಿ.

ರಾಜ ನಿಟ್ಟುಸಿರು ಬಿಟ್ಟು ಸುಮ್ಮನಾದ.

ಯಾತ್ರೆ ಬೆಳೆಸಿದೆವು.

—"ಕೀಫ"

ಸರ್ವಜ್ಞ........?

(ವೈದ್ಯಕೀಯ)

ಓದಲಾರದೆ ಡಾಕ್ಟರಿತ್ತ ಲವ್ ಲೆಟ್ಟರನು
ಕಾಂಪೌಂಡರ್ ಕೈಗಿಡಲು ಮಿಡ್ ವೈಫು, ಮೂಢೆ—6 oz,
ಮಿಕ್ಸ್‌ಚರನೆ ಕೊಟ್ಟನವ, ಸರ್ವಜ್ಞ.
ಕೈ ಬೆರಳ ಉಗುರನ್ನು ಗಂಡ ಜಗಿಯುವುದ ನೋಡಿ
ತಿದ್ದಿದಳು ಚಾಳಿಯನು, ಬಲುಬೇಗ, ಮಡದಿ—ಅವನ ಬಾಯ್
ಡೆಂಚರನೆ ಪುಡಿಮಾಡಿ, ಸರ್ವಜ್ಞ.
ಡಾಕ್ಟರೊಬ್ಬರ ತರದೆ ಸಾಯಿಸುವಿ, ಎಂದತ್ತೆ
ಬೈದಾಡುತಿರುವಾಗ ನೀವು ಸಿಕ್ಕಿರಿ, ಬಂದು,—ಹೊರವಡಿಸಿ
ಆ ದೂರು ತಪ್ಪಿತು, ಎನಗೆ—ಸರ್ವಜ್ಞ.
ಕಿವಿ—ಮೂಗು—ಕೊರಳಷ್ಟೆ! ಒಬ್ಬ ಡಾಕ್ಟರ ಕ್ಷೇತ್ರ—
ಪ್ರಖ್ಯಾತ ಮತ್ತೊಬ್ಬ ಮೂಗು ಒಂದನೆ ಬಲ್ಲ—ಮಗುದೊಬ್ಬ
ಬಲ ಹೊಳ್ಳೆ ಸ್ಪೆಷಲಿಸ್ಟು—ಸರ್ವಜ್ಞ.

—ಶಾಲಾಳಿ.

ಸಂದೇಹ-ಪರಿಹಾರ

ಟೆಕ್ಸ್ಟನ್ನು ಓದಲೆ ?
ಬೇಡ ! ಇಂದೇ ಏಕೆ ?
ಸಿನಿಮ ಹೋಗಲು ಚೆನ್ನ
ಅದನ್ನೋಡೆ,.....ಹುಮ್ಮಸ್ಸು.

ಪಾಸೂ ಫೆಯಿಲೂ ದೈವೇಚ್ಛೆ
ಈ ದಿನ ಷೋ ಇದು ಕಟ್ಟಕಡೆ
ರಂಪಕ್ಕೆ ಬೆದರಿ, ಕೌನ್ಸಿಲ್ಲು
ಡಿಗ್ರಿಯ ಕೊಟ್ಟೇ ಕೊಡಬೇಕು

ಗುದ್ದಲಿ ಶಾಸ್ತ್ರವ ನಾಬಲ್ಲೆ
ಹಾಸ್ಟಲ್ ಲೀಡರ್ ನಾನೇನೆ
ಬೇಕಾದರೊಂದು ಸ್ಟ್ರೈಕನ್ನೇ
ಜರುಗಿಸಬಲ್ಲೆ ! ನಾಳೀನೇ.

ಟೆಕ್ಸ್ಟನ್ನು ಓದಲೆ ?
ಯಾಕಪ್ಪ ?
ಸುಮ್ಮನೆ ಮಲಗಲೆ ?
ಯಾಕಪ್ಪ ?
ಸಿನಿಮ ನೋಡಲು
ಏನಪ್ಪ—
ಆತಂಕ ?

—ಕಾಮತ್.

ಪಂಪನ ಪ್ರಾಯದ ಪೆಂಪು

(ಪ್ರಾಚೀನ ಕವಿಜೀವನ ವಿಚಾರ-೩)

ಪಂಪನು ಕನ್ನಡದ ವಾಲ್ಮೀಕಿ, ಕಾಳಿದಾಸ, ಗಾರ್ಕಿ. ಅವನು ಮಹಾಕವಿಯೆಂಬಸಿದ್ಧಾಂತ ಎಂದೂ ವಾದಗ್ರಸ್ತವಾಗಿಲ್ಲ. ದೇಸೆ ಮಾರ್ಗ ಮೆಂಬೆರಡರೊಳಂ ಜಸಂ ಬಡೆದವನು. ಚತುರಂಗ ಬಲ ಭಯಂಕರಣ. ಪಂಚಶರೈಕ ರೂಪ. ಕವಿಯೂ ಕಲಿಯೂ ಆದ ಸವ್ಯಸಾಚಿ. ಭುವನ ಭವನ ಖ್ಯಾತರ ವಂಶದವನು. ಗಂಗಾವಾರ್ಧಿಯಲ್ಲಿ ಮಿಂದ ಕುದುರೆಯನ್ನು ಹತ್ತಿ ಸವಾರಿಮಾಡಿದವನ ಮಗನ ಆಶ್ರಿತ. ರಟ್ಟರ ಸುಖಕ್ಕೆ ಹುಳಿಹಿಂಡಿ ಬಿಜ್ಜನನ್ನು ಗೊಜ್ಜು ತಿನ್ನುವಂತೆ ಮಾಡಿದ ಮಹಾರಥರು ಅರಿಕೇಸರಿ ಪಂಪ. ಪಂಪನನ್ನು ಹೊಗಳದವರೇ ಇಲ್ಲ. ಅವನ ಪ್ರಶಂಶೆಯಲ್ಲಿ ಅಗ್ರಗಣ್ಯನಾದವನು ನಾಗರಾಜ ಎಂದು ಹೇಳಲಾಗಿದೆ. 'ಪಸರಿಪ ಕನ್ನಡಕ್ಕೊಡೆಯನೊರ್ವನೆ ಸತ್ಕವಿ ಪಂಪ' ಎಂದು ಅವನು ಹೇಳಿದ್ದಾನಂತೆ ಅದನ್ನು ಹಿಂದಿನವರೆಲ್ಲ ಒಪ್ಪಿದ್ದರು, ಇಂದಿನವರೂ ಒಪ್ಪುತ್ತಿದಾರೆ ಎಂದೂ ಹೇಳಲಾಗಿದೆ. ಸಾಹಿತ್ಯ ಚರಿತ್ರಕಾರರು, ತೀನಂಶ್ರೀ, ಮುಳಿಯತಿಮ್ಮಪ್ಪಯ್ಯ ಎಲ್ಲರೂ ನಾಗರಾಜನನ್ನು ತಾರೀಫು ಮಾಡುತ್ತಿದ್ದಾರೆ. ನಾಗರಾಜ ನೆಹರು. ಅವನು ಹೇಳಿದುದನ್ನೆಲ್ಲ ಒಪ್ಪುವರು ಈ ಕಾಂಗ್ರೇಸ್ ಸದಸ್ಯರು.

ಇಂದಿನವರು ಒಪ್ಪಿಯಾರು. ಒಂದೂವರೆ ಕಾದಂಬರಿ ಕೈಲಿರಲು ಕನ್ನಡಕ್ಕೆ ಯಾರು ಒಡೆಯರಾದರೇನು ಎನ್ನುತ್ತಾರೆ. ಆದರೆ ಹಿಂದಿನವರೂ ಒಪ್ಪಿದ್ದಾರೆ ಎಂದು ನನ್ನೆದುರು ಬುರುಡೆ ಬಿಟ್ಟರೆ ನಾನು ಕೇಳುವುದಿಲ್ಲ.

ನಾಗರಾಜ ನನಗೆ ಕೇವಲ ಪರಮಾಪ್ತಮಿತ್ರ. ಮೊನ್ನೆ ಇನ್ಸಾನಿಯತ್‌ಗೆ ಜೊತೆಯಲ್ಲೇ ಹೋಗಿದ್ದೆವು. ನಿನ್ನೆ ನನಗೆ ಕಾಫಿಕೊಡಿಸಿದ ಈ ದಿವಸ ಬೆಳಿಗ್ಗೆ 'ಮೇರಾ ಜೂತಾ ಹೈ ಜಾಪಾನಿ' ಎಂದು ಗೊಣಗುತ್ತಿದ್ದ. ಹತ್ತು ಗಂಟೆಗೆ ಸಾಹಿತ್ಯ ಚರಿತ್ರೆಯನ್ನು ತೆಗೆದು ನೋಡಿದರೆ ಅವನಾಗಲೇ ಪಂಪನ ಅಥಾರಿಟಿಯಾಗಿ ಬಿಟ್ಟಿದ್ದ. ಗಾಬರಿಯಾಗಿ ಕವಿಚರಿತೆಯನ್ನು ತೆಗೆದು ನೋಡಿದೆ. ಕ.ಚ. ಕಾರರು ನಾಗರಾಜನು ಸಾಗರದವನಿರಬಹುದು ಎಂದು ಹೇಳಿದ್ದಾರೆ. ಸರಿ. ಐಕ್‌ಸ್ಪಾಲಿನನ ಭಾವ ಮೈದುನ ಹೇಳಿಯಾರು! ಕೇಳುವವರಿದ್ದರೆ, ನಾಗರಾಜ ದಾವಣಗೆರೆಯವನು. ಅವನು ಭವ್ಯಜನರ ಹೇಳಿಕೆಯಂತೆ 'ಪುಣ್ಯಾಸ್ರವ ಚಂಪು' ವನ್ನು ಬರೆದನೆಂದೂ ಅವರು ಹೇಳುತ್ತಾರೆ. ಪರೀಕ್ಷೆಯಲ್ಲಿ ಕಾಪಿ ಹೊಡೆದು ಬರೆದ ಉತ್ತರ, ದುಡ್ಡು ಕಳಿಸು ಎಂದು ಅಪ್ಪನಿಗೆ ಬರೆದ ಕಾಗದಗಳು ಇವನ್ನು ಬಿಟ್ಟರೆ ಅವನು ಬರೆದಿರುವುದು ಒಂದು

'ಲವ್ವಲೆಟರು'. ಅದನ್ನು ಬರೆಯಬೇಡ ಎಂದು ನಾವೆಲ್ಲ ಬೇಡಿಕೊಂಡೆವು ಅವನು ಕೇಳಲಿಲ್ಲ. ಇವನು ಪಂಪನೇ ಕನ್ನಡದೊಡೆಯ ಎಂದು ಬರೆದಿರುವುದನ್ನು ಕೇಳಿ (ಓದಿ) ಅವನ ಮನೆಗೆ ಓಡಿ.

'ನಾಗರಾಜು, ನಿನಗೆ ಪಂಪ....'........' ಎಂದೆ

" ಕಿರ್ಲೋಸ್ಕರ ಸೆಂಟ್ರಿಫ್ಯೂಗಲ ಪಂಪ ?' ಎಂದನವ.

ಓ! ದೇವತೆಗಳೇ ಇವನೀಗ ಪಂಪನ ಅಥಾರಟಿ. ಇವನ ಮಾತನ್ನು ಮಹನೀಯರೆಲ್ಲಾ ನಂಬಿದಾರೆ. ಈ ಅನುಭವದ ನಂತರ ಪಂಪನ ಪ್ರಶಂಸೆಯಲ್ಲಿ ಯಾವುದೋ ಅಪಸ್ವರವಿರಬೇಕೆಂದು ನಾವು ನಿರ್ಧರಿಸಿ ಗ್ರಂಥಾವ ಲೋಕನಕ್ಕೆ ತೊಡಗಿ ಸಂಶೋಧನೆ ಮಾಡಿ ಆದರ ಸಾರಾಂಶವನ್ನು ವಾಚಕರ ಅವಗಾಹನೆಗೆ ತರುತ್ತಿದೇವೆ.

ಪಂಪ ಸಮಸ್ಯೆಗಳಿವು :- ಪುಲಿರೆಗೆಯ ಅರಿಕೇಸರಿ ಪಂಪರಿಗೆ ಬನವಾಸಿಯ ಮೋಹವೇಕೆ ? ಅಂಕುಶವಿಟ್ಟರೆ ಪಂಪನು ಬನವಾಸಿಯನ್ನೇಕೆ ನೆನೆಯುತ್ತಿದ್ದ ? ನಲವತ್ತನೆಯ ವಯಸ್ಸಿನಲ್ಲಿ ಕಾವ್ಯರಚನೆಗೆ ಕೈಹಾಕಿದ ಪಂಪನು ಅಷ್ಟುದಿನವೂ ಉದ್ದುಹುರಿಯುತ್ತಿದ್ದನೆ ? ಇಲ್ಲವೆಂದರೆ ಏನು ಮಾಡುತ್ತಿದ್ದ ? ವಿಕ್ರಮಾರ್ಜುನ ವಿಜಯದ ಅರ್ಜುನನು ಪ್ರೇಮತಪ್ತನಾದ ರಾತ್ರಿ ಸೂಳೆಗೇರಿಗೆ ಹೋದನೆಂದು ಹೇಳಿರಲು ಕಾರಣವೇನು ? ಇತ್ಯಾದಿ ನೂರಾರು.

ಪಂಪನನ್ನು ಕುರಿತು ಅನೇಕ ವಿದ್ವಾಂಸರು ಬರೆದಿರುವ ಗ್ರಂಥಗಳನ್ನು ಓದಿರಿ. ಅದರಲ್ಲಿ ನಿಮ್ಮ ಮನಸ್ಸಿಗೆ ಸಂಶಯಗಳು ಬಂದಾಗ ಈ ಲೇಖನವನ್ನೋದಿ.

'ದಂತಗಳು ಸಡಿಲಿ,' ಅರೆ ಬಕ್ಕತಲೆಯಾಗಿ, ಕಾರಂತಕೂದಲು ಬೆಳೆದ ಪಂಪನನ್ನು ಕುರಿತು ನಾವು ಬರೆಯುವುದಿಲ್ಲ. ಪ್ರಾಯದ ಪೆಂಪೆ ಪೆಂಪೆಮಗೆ ಎಂದು ಮೆರೆಯುತ್ತಿದ್ದ ಹರೆಯದ ಪಂಪನ ಕಥೆ ಇದು.

ತಂದೆತಾಯಿಗಳು ಬಾಲ್ಯದಲ್ಲೇ ತೀರಿಕೊಳ್ಳಲು ಅರಿಕೇಸರಿಯು ಪದಭ್ರಷ್ಟನಾದ ತನ್ನ ಸೋದರಮಾವ ಇಂದ್ರನ ಮನೆಗೆ ಹೋಗಿ, ಜಂಬುಕವಾಗಿ ಬಾಳುತ್ತಿದ್ದನು. ಬರಿಗೈ ಪಂಪನೂ ಇಂದ್ರರಾಜನಿದ್ದ ಬನವಾಸಿಗೆ ಹೋದನು. ಪಾಪರುಗಳಾಗಿದ್ದ ಅವರು ಇತಿಹಾಸದಲ್ಲೇ ಪ್ರಪ್ರಥಮವಾಗಿ ಕಮ್ಯುನಿಷ್ಟ್ ಪಾರ್ಟಿಯನ್ನು ಸ್ಥಾಪಿಸಿದರು. ಇಂದ್ರರಾಜ ಲೆನಿನ್ ಅರಿಕೇಸರಿ ಪಂಪರು ಸ್ಟಾಲಿನ್, ಮಾಲಟೋವ್. ಗಾಬರಿಯಾಗ ದಿರಿ ವಿಕ್ರಮಾರ್ಜುನವಿಜಯದ ಪೀಠಿಕಾ ಸಂಧಿಯಲ್ಲಿ ಪಂಪನು ಅರಿಕೇಸರಿಯು ಉದಾರ ಮಹೇಶ್ವರ, ಉದಾತ್ತ ನಾರಾಯಣ, ನಿರ್ಜಿತಗಣಪ ಎಂದು ಹೊಗಳಿ ನಿರೀಶ್ವರವಾದವನ್ನು ಸ್ಥಾಪಿಸಿದಾನೆ. ಕಮ್ಯುನಿಸ್ಟ್ ಸಾಹಿತಿಗಳು ಕಾಮ್ರೇಡ ಸ್ಟಾಲಿನ್ನನನ್ನು ಹೊಗಳುವುದಿಲ್ಲವೇ ಹಾಗೆ. ಅದಕ್ಕೆ ನಮ್ಮ ಹೊಸ ಪೀಳಿಗೆಯ ಸಾಹಿತಿಗಳು ಪಂಪನು ಕ್ರಾಂತಿಕಾರ ಕವಿ ಎನ್ನುವುದು.

ಅಂದು ರಾಷ್ಟ್ರಕೂಟ ಚಕ್ರವರ್ತಿ ಗೋವಿಂದ (ಗೊಜ್ಜಿಗ)ನು ಸಾರ್ ಚಕ್ರವರ್ತಿಯಂತೆ ದಬ್ಬಾಳಿಕೆ ನಡೆಸುತ್ತಿದ್ದನು. ಕಮ್ಯುನಿಸ್ಟ್ ಪಾರ್ಟಿ ವರ್ಗಸಮರವನ್ನು ಸಾರಿತು. ಅಂದಾದ ಚಿಕ್ಕ ಪುಟ್ಟ ಕದನಗಳಲ್ಲಿ ಪಂಪ, ಅರಿಕೇಸರಿಗಳು ಪ್ರಸಿದ್ಧ ನಾಯಕರಾದರ.. ಹೀಗೆ ತುಮುಲದಲ್ಲೇ ಅವರು ಬೆಳೆದು ದೊಡ್ಡವರಾದರು. ಮೀಸೆ ಚಿಗುರೊಡೆಯಿತು. ದೇಶಕ್ಕೆ ಹೊಸದೊಂದು ರಂಗು ಬಂದಂತೆ ತೋರಿತು.

ಆಗ ಪಂಪನು ಅನೇಕ ಬಗೆಯ ಕಬ್ಬಗಳನ್ನು ರಚಿಸಲಾರಂಭಿಸಿದನು. ಸ್ಫೂರ್ತಿಗೆ ಆಗರವೊಂದು ಬೇಕಲ್ಲ? ಅಲ್ಲದೆ ಪಾರ್ಟಿಯ ಕಾರ್ಯಭಾರದ ನಡುವೆ ಅವರಿಗೆ ಬಿಡುವೇಸಿಗುತ್ತಿರಲಿಲ್ಲ. ಆಗ ಪಂಪ, ಅರಿಕೇಸರಿಗಳು ಬೇಸರಮಂ ತವಿಸಲೆಂದು, ರಾತ್ರಿಯೊಳ್ ವಿಟ, ನಾಗರಕ, ಫೀಠ ಮರ್ದಕರ್ಕಳ್ ಬೆರಸು, (ಅರ್ಜುನ ದ್ವಾರಕಿಯ ಸೂಳಿಗೇರಿಯಲ್ಲಿ ಹೊರಟಂತೆ) ಹೊರಟು ಬಿಡುತ್ತಿದ್ದರು. 'ಪಂಚಬಾಣನೆಂದೆಂದುಂ ಆಳ್ಗೆ' 'ರತಿರಾಜ್ಯಂ ಪಲಕಾಲ ಬಾಳ್ಗೆ' 'ಜೈಸ್ವಪ್ನಸುಂದರೀ' ಎಂದು ಘೋಷಿಸುತ್ತಿದ್ದರವರು. ಪ್ರೋರ್ಕುಳಿ ಬೊಜಂಗರ ಸ್ನೇಹ ಬೆಳೆಸಿ ಪೆಂಡವಾಸದೊಳ್ಪೆಂಡಿರು, ಜೋಡೆಯರು, ಅಭಿಸಾರಿಕೆಯರ ಸೌಂದರ್ಯ ಮೀಮಾಂಸೆ ಮಾಡುತ್ತಾ ಒಮ್ಮೆ ಹೊರಟರೆ ನಿರಾಯಾಸವಾಗಿ ಬೆಳಗಾಗುತ್ತಿತ್ತು. 'ದೇಸಿಮಾರ್ಗ ಮೆರಡರೊಳು ಜಸಂಬಡೆದಂ' ಎಂದರರ್ಥ ವಿಷ್ಟೇ. ಮಾವನ ಮನೆಯಲ್ಲಿ ಇದ್ದ ಅಸಗನ ಶಿಷ್ಯನು ಮಾಡಿದ ದೋಸೆಗಳನ್ನು ತಿನ್ನುವುದರಲ್ಲೂ ಸೂಳಿಕೇರಿಯ ಮಾರ್ಗದಲ್ಲೂ ಪಂಪನು ಪ್ರಸಿದ್ಧನಾಗಿದ್ದ. ಎಂಥ ಪ್ರಸಿದ್ಧಿ ಅವರದು. ಪಂಪನೇ ಹೇಳುವುದನ್ನು ಕೇಳಿ 'ಸೋಲದುಕಣ್ ಪರವಧುವಿಗಂ ಪರಬಲಾಬ್ಧಿಗಂ' ಅಭಿಸಾರಿಕೆಯರನ್ನು ನೆಟ್ಟಕಣ್ಣಿನಿಂದ ನೋಡಲು ಅವರು ಆರಂಭಿಸಿದರೆಂದರೆ ಅವರು ಸೋಲುವವರೆಗೂ ಇವರ ಕಣ್ಣುಗಳು ಸೋಲುತ್ತಿರಲಿಲ್ಲ. ಸೊಗಯಿಸಿ ಬಂದ ಮಾಮರಗಳ ಬೀದಿ. ವೇಶ್ಯಾವಾಟಿಕೆಗಳಿಗೆ ಹಬ್ಬಿದ ತಳ್ತಲೆವಳ್ಳಿ, ಅವರು ಮುಡಿದ ಪೂತ ಜಾತಿ ಸಂಪಿಗೆ ವಿರಹವನ್ನಿಮ್ಮಡಿ ಮಾಡುತ್ತಿದ್ದ 'ಕುಕಿಲ್ವಕೋಗಿಲೆ ಪಾಡುವ ತುಂಬಿ'ಗಳು ಇಂತಹ ಸನ್ನಿವೇಶದಲ್ಲಿ ಪಂಪನು ತಿರುಗಾಡಿ ಕೈತವಗಬ್ಬ, ಸಿಂಗಾರಗಬ್ಬ ಇತ್ಯಾದಿ ಆರು ಗಬ್ಬಗಳನ್ನು ಬರೆದು ಜನಪ್ರಿಯನಾದ. ಯಥಾಪ್ರಕಾರ ಬಂಡವಾಳ ಶಾಹೀ ಪಂಡಿತರು ಅವನನ್ನು ನಿಂದಿಸುತ್ತಿದ್ದರು. ನಾವು ಹೇಳಿದ ಈ ಮಾತನ್ನು ಯಾರೂ ಅಲ್ಲಗೆಳೆಯಲಾರರು. ವಿಕ್ರಮಾರ್ಜುನ ವಿಜಯ ಚಾರಿತ್ರಿಕ ಧ್ವನಿಕಾವ್ಯ ಎಂದು ಎಲ್ಲರೂ ಒಪ್ಪುತ್ತಾರೆ. ಇಷ್ಟರಮೇಲೆ ಪಂಪಮಾಡಿದ ತಪ್ಪಾದರೂ ಏನು? (ದೇವೇಂದ್ರನಿಗಿಂತ ಅವನು ? ಛೆ ಛೆ ಒಳ್ಳೆಹುಡುಗ! ಪಂಪ!)

ಕ್ರಿ. ಶ. ೯೩೦ನೆಯ ವರ್ಷ. ಝೂರನಾದ ಗೊಜ್ಜಿಗನ ಕಾಟ ಹೆಚ್ಚಿತು. ಇನ್ನು ಇವನ ಆಳಿಕೆಯನ್ನು ಕೊನೆಗಾಣಿಸಬೇಕೆಂದು ಕಮ್ಯೂನಿಸ್ಟ್ ಪಾರ್ಟಿ ನಿರ್ಧರಿಸಲು, ಇಂದ್ರರಾಜನ ಮತ್ತು ಅರಿಕೇಸರಿಯ ಸೈನ್ಯಗಳು 'ಕ್ರಾಂತಿಗೆ ಗೆಲವಕ್ಕೆ' ಎನ್ನುತ್ತಾ ಕಾರ್ಮಿಕರೊಡನೆ ಹೊರಟವು. ಈ ಸೇನೆಗೆ ಪಂಪನೇ ದಳನಾಯಕ. ಅತ್ತ

ಗೊಜ್ಜಿಗನ ಬಂಡವಾಳ ಶಾಹೀ ಸೈನ್ಯವೂ ಬಂತು. ಎರಡು ಸೈನ್ಯಗಳೂ ಕಾಳಗದ ಕಳದಲ್ಲಿ ಬೀಡುಬಿಟ್ಟವು.

ರಾತ್ರಿ ಬೆಳದಿಂಗಳು ಹರಡಿತ್ತು, ಹಾಲಿನಂತೆ. ಇಂದ್ರರಾಜನ ಬಿಡಾರದಲ್ಲಿ ಕ್ರಾಂತಿಯ ತ್ರಿಮೂರ್ತಿಗಳ ಸಭೆ ಸೇರಬೇಕಿತ್ತು. ಒಂಭತ್ತು ಗಂಟೆಗೆ ಅರಿಕೇಸರಿಯು ಬಂದ. ಪಂಪ ಬರಲಿಲ್ಲ. ಕಾದರು. ನಿಷ್ಪ್ರಯೋಜನ. "ಕರೆಯಿರೊ ಪಂಪನನ್ನು" ಎಂದರು. ಹುಡುಕಿದರು. ಪಂಪನು ಪತ್ತೆಯಿಲ್ಲವಾಗಿದ್ದ. ಚತುರಂಗಬಲ ಭಯಂಕರಣ, ದಳಪತಿ ಇಲ್ಲ! ಕಲಿಯೂ ಕವಿಯೂ ಆದ ಸವ್ಯಸಾಚಿ ಇಲ್ಲ. ಬೆಳಗಾದರೆ ಯುದ್ಧ. ಅವನಿಲ್ಲ! ಇಲ್ಲ! ಅವನೆಲ್ಲಿ? ಎಲ್ಲಿ?

ಎಲ್ಲಿದ್ದ ಪಂಪ? ಏನು ಮಾಡುತ್ತಿದ್ದ? ಏಳುವ ಗಂಟೆಗೇ ಅವನು ತೇಜಿಯನ್ನೇರಿ ಬನವಾಸಿಯ ದಾರಿಯನ್ನು ತುಳಿಯುತ್ತಿದ್ದ. ಎಂಟು ಗಂಟೆಗೆ ಬನವಾಸಿಯನ್ನು ತಲುಪಿದ. ಎಂಟುವರೆ ಗಂಟೆಗೆ ವಿಟ, ನಾಗರಕ, ಪೋಕರ್ಮಳಿ ಬೊಜಂಗರೊಡನೆ ಬನವಾಸಿಯ ಮಾರ್ಗದಲ್ಲಿ ಹೊರಟಿದ್ದ. ಒಂಭತ್ತು ಗಂಟೆಗೆ ರೇವಕನ ಮನೆಯಲ್ಲಿ ನೀಲಾಂಬರೆಯ ತಗುಳ್ದೊಂದು ಗೇಯವನ್ನು ಕೇಳುತ್ತಾ ನರ್ತನವನ್ನು ನೋಡುತ್ತಿದ್ದ. "ಜಗಮಂ ಮಾಡಿದ ಪದ್ಮಜಂ ಪಡೆದನಿಲ್ಲೀ ಕನ್ನೆಯಂ" ಎಂದು ನಿರ್ಧರಿಸಿದಾನೆ. ನರ್ತನ, ಮಧುಪಾನ, ಗೇಯಗಳ ದೆಸೆಯಿಂದ ಮೈಮರೆದು ನರ್ತಕಿಗೆ ಹೇಳುತ್ತಿದಾನೆ ಪಂಪ: "ಮೈನೆದಿಲ್ ತುಝುಕೊ ದಿಯಾ" ಹೀಗಿರುವವನು ರಣರಂಗದಲ್ಲೆಲ್ಲಿ ಸಿಗಬೇಕು?

ಸಮಾನಶೀಲ ಅರಿಕೇಸರಿಗೆ ಪಂಪನ ಬಗೆಗೆ ಸಂಶಯ ಹುಟ್ಟಿತು. ಪಂಪ ಬನವಾಸಿಗೇ ಹೋಗಿರಬೇಕು! ಅವನ ದೇವರ ಸತ್ಯವಲ್ಲವೇ? ಕೂಡಲೇ ಅರಿಕೇಸರಿಯು ಶ್ರೀಘ್ರಗಾಮಿ ಮಾವುತರನ್ನು ಕರೆದು, ಪಂಪನನ್ನು ಹಿಡಿದು ತರಲು ಆಜ್ಞಾಪಿಸಿ, ಅವರನ್ನಟ್ಟಿದ. ಅವರು ಬಂದರು. ಬಂದಾಗ ಪಂಪನಿಗೆ ಏನೂ ಎಚ್ಚರವಿರಲಿಲ್ಲ. ಮುಟ್ಟಿದರು. ತಟ್ಟಿದರು. ಎಚ್ಚರಗೊಳ್ಳಲಿಲ್ಲ ಪಂಪ. "ಬೇರೆ ಕೊಂಚ ಮಧು ಪಾತ್ರಕ್ಕೆ ಹಾಕಿ ಪಾನಂ ಬೇರೆತ್ತಿ ಕಟ್ಟಿ ಮಧುವಂ ಬೆರೆತ್ತವನ್" ಎಂದು ಕನವರಿಸುತ್ತಿದ್ದ.

ಮಾವುತರು ಪೋಸ್ಟಾಫೀಸಿಗೆ ಧಾವಿಸಿ ಟ್ರಂಕ್ ಫೋನ್ ಕಾಲ್ ಬುಕ್ ಮಾಡಿದರು. ಅರಿಕೇಸರಿ ಫೋನಿನಲ್ಲಿ ಹೇಳಿದ, "ಅಲ್ಲೋ! ಅಲ್ಲೋ! ಯಾರು ಯಾರು ರೇಚಮಲ್ಲನೋ? ಏನಾಗಿದೆ? ಪಂಪ ಸಿಕ್ಕನೆ? ಆ! ಆ! ನೀಲಾಂಬರೆಯ ಮನೆಯಲ್ಲಿ........ಅಲ್ಲೋ! ಬಹಳ ಡಿಸ್ಟರ್ಬೆನ್ಸ್ ಈ ಹಾಳು ಫೋನಿನಲ್ಲಿ....ಮೂರು ರೂಪಾಯಿ ಛಾರ್ಜ್ ಬಿಟ್ಟೆಯಲ್ಲರೀ, ಸರಿಮಾಡಿ ಲೈನನ್ನು........ಅಲ್ಲೋ ಹಿಡಿದುಕೊಂಡು ಬನ್ನಿ. ಬಿಡಬೇಡಿ."

ಮಾವುತರು ಪಂಪನನ್ನು ದೊಣ್ಣೆಗಳಿಂದ ಹೊಡೆದರು. ಅದಕ್ಕೂ ಎಚ್ಚರವಾಗ ದಿರಲು ಅಂಕುಶದಿಂದ ತಿವಿದರು.

ಆಗ ಕಲಿ ಪಂಪ ಎಚ್ಚೆತ್ತ. ಬಂದ (ರಣ ರಂಗಕ್ಕೆ) ನೋಡಿದ (ಶತ್ರುಬಲ ವನ್ನು) ಜಯಿಸಿದ (ಕಾಳಗವನ್ನು).

ಕಾನ್ಫ್ರೇಡ್ ಅರಿಕೇಸರಿ ಪುಲಿಗೆರೆಯಲ್ಲಿ ಗದ್ದುಗೆಯನ್ನೇರಿದ. ಪಂಪನಿಗೆ ಆಸ್ಥಾನ ಪಂಡಿತ ಪದವಿ ದೊರೆಯಿತು. ದಂಡನಾಯಕತ್ವ ತಪ್ಪಿಹೋಯ್ತು. ಪುಲಿಗೆರೆ ಯಲ್ಲಿದ್ದ ಅವನಿಗೆ ಬನವಾಸಿ ಇನ್ನೂರು ಮೈಲು ದೂರವಾಯ್ತು. ಕನಸಾಯ್ತು.

ಆದರೂ ಮಲ್ಲಿಗೆ (ಹೂವೋ ? ಹೆಣ್ಣೋ ?) ತೆಂಕಣ ಗಾಳಿ. ಸಂಗೀತ, ಮಧುಮಹೋತ್ಸವ (ಪುಲಿಗೆರೆಯ ತಿರುಳ್ಗನ್ನಡ) ಅರ್ಥಾತ್ ಸರಾಯಿ (ದಾವಣ ಗೆರೆಯ ತಿರುಳ್ಗನ್ನಡ) ಕುಡಿತದ ಸಂತೆ. ಕುಳಿರ್ಕೊಳ್ಪ ಜೊಂಪು ಇವುಗಳನ್ನೆಲ್ಲಾ ನೋಡಿ ಪಂಪನು, ಆಹಾ ನನ್ನ ಬನವಾಸಿ ಎಷ್ಟು ಚೆನ್ನಾಗಿತ್ತು, ಎಂದು ಹಂಬಲಿ ಸುವನು. ಅಂಕುಶಗಳನ್ನು ಹಿಡಿದು ಬರುವ ಮಾವುತರನ್ನು ನೋಡಿದರೆ ತೀರಿ ಹೋಯ್ತು, ಬೇಡವೆಂದರೂ ಬನವಾಸಿಯಲ್ಲಿ ತನ್ನ ಕೊನೆಯ ರಾತ್ರಿ ನೆನಪಾಗುತ್ತಿತ್ತು. ಆ ದಿನದ ಸುಖಾನುಭವವನ್ನು ಪಂಪನು "ಏವೇಳ್ವುದನುಳ್ಳ ಮೈಸುಕಂ" ಎನ್ನು ತ್ತಾನೆ. ಏನು ಹೇಳುವುದು ದೊಣ್ಣೆಯ ಬಡಿತ, ಅಂಕುಶದ ತಿವಿತ—ಹೇಳುವಂತಿಲ್ಲ ಬಿಡುವಂತಿಲ್ಲ.

ಇಂತಹ ಪಂಪ ಕನ್ನಡದ ಒಡೆಯನೆಂದು ಹೇಳುತ್ತಾನೆ ನಾಗರಾಜ. ಅವನಿ ಗೇನೋ ಬುದ್ಧಿಯಿಲ್ಲ. ಕುವೆಂಪುರವರಿಗೆ ಕವಿಯಬೇಕೇ ಮಂಕು. ಕನ್ನಡದ ರಾಜ್ಯದಲ್ಲಿ ಪಂಪನೇ ಮುಖ್ಯ ಮಂತ್ರಿಯಾಗಲಿ ಎಂದಿದಾರಂತೆ. ಅರಿಕೇಸರಿಗೆ ದಳನಾಯ್ಕನಾದಾಗಲೇ ಪಂಪ ಹಾಗಿದ್ದ. ಮುಖ್ಯ ಮಂತ್ರಿಯಾದರೆ ತೀರಿ ಹೋಯಿತು.

ಪಂಪನು ಮುಂದೆ ಮರ್ಯಾದಸ್ತನಾಗಿ ಬಾಳಿಬದುಕಿ ಕಾವ್ಯರಚನೆ ಮಾಡಿರಲೇ ಬೇಕು. ಇಲ್ಲದಿದ್ದರೆ ಆದಿಪುರಾಣ ವಿಕ್ರಮಾರ್ಜುನ ವಿಜಯಗಳು ಇರುತ್ತಿರಲೇ ಇಲ್ಲ.

ಬಾಳಲಿ ಸ್ವಾಮಿ. ಅವನನ್ನು ಕಂಡು ಹೊಟ್ಟೆಕಿಚ್ಚು ಪಡುವವರಲ್ಲ ನಾವು. ನಮಗೆ ತಿಳಿದಂತೆ ಅವನಿಗೆ ಕೆಟ್ಟಮೇಲೆಯೇ ಬುದ್ಧಿಬಂತು ಎಂದು ಹೇಳಿದೆವು ಅಷ್ಟೇ.

"ಬ್ರಹ್ಮಜ್ಞಾನ ನನಗಿರುವುದು ಇಷ್ಟೇ. ಇದಕ್ಕಿಂತ ಹೆಚ್ಚು ಏನೂ ಇಲ್ಲ" ಎಂದರಂತೆ ಯಾರೋ ಮಹರ್ಷಿಗಳು ಯಾವುದೋ ಉಪನಿಷತ್ತಿನಲ್ಲಿ. "ಬ್ರಹ್ಮ" ಎಂಬುದರ ಬದಲು "ಪಂಪ" ಎಂದು ಓದಿಕೊಂಡುಬಿಡಿ. ನಾವು ಪಂಪನನ್ನು ಕುರಿತು ಹೇಳುವುದಿರುವುದು ಅಷ್ಟೇ.

—ಅ. ರಾ. ಸೇ.

ಪ್ರಾಣೇಶ ಪ್ರಸಂಗ

ಡಲ್ಲೇಶನ ಗುಡ್‌ಟರ್ನ್

ಬರಬರುತ್ತಾ ನಮ್ಮ ಪ್ರಾಣೇಶನಿಗೆ ಬಿಡುವೇ ಇಲ್ಲವಾಗಿದೆ. ಅವನ 'ನೋವೋಕಿಲ್' ಮಾತ್ರೆಗಳಿಗೆ ಎಲ್ಲಿಲ್ಲದ ಡಿಮ್ಯಾಂಡ್ ಈಗ. ರಾಜ್ಯಪುನರ್ರಚನಾ ಆಯೋಗದವರ ವರದಿ ಪ್ರಕಟವಾದ್ದರಿಂದಲೋ ಅಥವಾ ಕೆಲವು ಹೋಟೆಲ್‌ಗಳವರು ಮಸಾಲೆ ದೋಸೆಗಳ ದರ ಇಳಿಸಿದ್ದರಿಂದಲೋ ಅಥವಾ ತಮಿಳು ಕನ್ನಡ ಚಿತ್ರಗಳೇ ಸದ್ಯ ನಮ್ಮೂರಲ್ಲಿ ಹೆಚ್ಚಾಗಿ ಪ್ರದರ್ಶಿತವಾಗುತ್ತಿರುವುದರಿಂದಲೋ ಏನೋ ತಿಳಿಯದು—ಎಲ್ಲ ಬಗೆಯ ನೋವುಗಳಿಗೂ 'ರಾಮ ಬಾಂಬು' ಎನ್ನಿಸಿದ 'ನೋವೋಕಿಲ್' ಮಾತ್ರೆಗಳಿಗೆ ಬೇಡಿಕೆ ಹೆಚ್ಚಾಗಿದೆ. ಪ್ರಾಣೇಶನಿಗೆ ಅವುಗಳ ಮಾರಾಟದ ಕುರಿತು ಲೆಕ್ಕಪತ್ರ ಇಡಲು ಸಮಯ ಸಾಕಾಗುತ್ತಿಲ್ಲ. ನಡುನಡುವೆ ಉಗುರು ಕಡಿಯುತ್ತ ಏನೇನೋ ಕಾಗದಗಳನ್ನು ಮಗುಚುತ್ತ ಕುಳಿತಿದ್ದ ಅವನನ್ನು ಕಂಡು ಕನಿಕರ ಉಕ್ಕಿಬಂತು. ಒಂದು ನಿಮಿಷವಾದರೂ ಪ್ರಾಣಿಯನ್ನು 'ನೋವೋಕಿಲ್' ರಾಜ್ಯದಿಂದ ಹೊರಗೆಳೆಯೋಣ ಎಂದುಕೊಂಡು—"ಲೋ ಪ್ರಾಣೇಶ, ಡಲ್ಲೇಶ್ ಏನಂತಾನೆ ಗೊತ್ತೋ?"—ಎಂದು ಕೇಳಿದೆ.

"ಕಂಡಿದೀನಿ ಕಣೋ. ಆವಾಗಲೇ ಓದಿದೆ. ನಿಜವಾದ ಸ್ಕ್ಯಾಟ್ ಅಂದರೆ ನಮ್ಮ ಡಲ್ಲೇಶ್ ಅಂತೀನಿ"—ಎನ್ನುತ್ತಾ ಪೆನ್ನನ್ನು ಟಾಪಿನೊಳಗಿಟ್ಟು ತಿರುವಿ ತನಗೆ ಅತ್ಯಂತ ಪ್ರಿಯವಾದ ರಾಜಕೀಯ ತಲೆಹರಟೆಗೆ ಸಿದ್ಧನಾದ, ಪ್ರಾಣೇಶ.

"ಅದೇನೋ ಗುಂಭವಾಗಿ ಆಡ್ತಿದೀಯ? ಡಲ್ಲೇಶ್ ಹೇಳ್ತಾನೆ, ಗೋವಾ ಪೋರ್ಚುಗಲ್ಲಿನ ಒಂದು ಭಾಗ ಅಂತ. ನೀನಂತೀಯ, ಡಲ್ಲೇಶ್ ಅಂದರೆ ನಿಜವಾದ ಸ್ಕ್ಯಾಟು ಅಂತ. ನನಗರ್ಥವಾಗೋದಿಲ್ಲಪ್ಪ; ಕೊಂಚ ಬಿಡಿಸಿ ಹೇಳು" ಎಂದು ಕೇಳಿಕೊಂಡೆ.

"ಅರ್ಥವಾಗೊಲ್ಲವೆ? ಹೇಳ್ತೀನಿ ಕೇಳು: ನಮ್ಮ ಡಲ್ಲೇಶ್‌ನಂಥವರು ನಾಲ್ಕು ಮಂದಿ ಆಗಾಗ ಹಾಗೆ ಆಡ್ತಾನೇ ಇರಬೇಕು. ಇಲ್ಲದೆ ಇದ್ದರೆ ಲೋಕದಲ್ಲಿ ಕಚ್ಚಾಟ, ಬಡಿದಾಟ ಒಂದೂ ಷುರುವಾಗೋದೇ ಇಲ್ಲ.

"ಹೊಡೆದಾಟ ಬಡಿದಾಟ ಷುರು ಆಗೋ ಹಾಗೆ ಮಾಡೋದು ಮಹಾ ಪುಣ್ಯ ಕಾರ್ಯ ಅಲ್ಲವೇ? ನಿನ್ನ ನಡವಳಿಕೆಗೆ ಸರಿಯಾದ ತತ್ವಾನೇ ಪ್ರತಿಪಾದಿಸ್ತಾ

ಇದೀಯು ಬಿಡು. ನಿನ್ನೆ ಟೌನ್ ಹಾಲ್ ಹತ್ತಿರ ಆ ಏಕ ಕರ್ಣಾಟಕವಾದಿ ರಾಮಯ್ಯನಿಗೂ ದ್ವಿಕರ್ನಾಟಕವಾದಿ ಗೋವಿಂದಪ್ಪನಿಗೂ ಜಗಳ ತಂದು ಹಾಕಿ ಅವರಿಬ್ಬರೂ ಎಗರಾಡ್ಡೋ ಹಾಗೆ ಮಾಡಿಬಿಟ್ಟು, ಗುಂಪು ಸೇರ್ರೋಹಾಗೆ ಮಾಡಿ ನೀನು ಜಾರಿಕೊಂಡಿಲ್ಲವೆ? ಒಳ್ಳೇ ಧೀರರು ಬಿಡಿ, ನೀನು ಮತ್ತು ಆ ಡಲ್ಲೇಶ್! ಸ್ನ್ಯಾಕಟುಗಳು ಅಂದರೆ ನೀವೇ ಸರಿ!"

"ಅದಕ್ಕೆ ಹೇಳೋದು ನಿನಗೆ ದೂರ ದೃಷ್ಟಿ ಇಲ್ಲ ಅಂತ. ರಾಮಯ್ಯ ಗೋವಿಂದಪ್ಪ, ಪರಸ್ಪರ ಒಂದು ಹಲ್ಲು ಉದುರಿಸಿಕೊಂಡಿದ್ದರಿಂದ ನಿನ್ನೆ ನಮ್ಮ ಸಂಗೀತ ಕಚೇರಿ ಆತಂಕವಿಲ್ಲದೆ ನಡೆಯಿತು. ಮನೆಗೆ ಬರೋ ಮಾರಿಗಳನ್ನ ದಾರೀಲೇ ಹಿಡಿದು ಆಸ್ಪತ್ರೆಗೆ ರವಾನಿಸಿದ್ದಕ್ಕೆ ಭಲೇ ಅನ್ನೋದು ಬಿಟ್ಟು ಬೈತೀಯಲ್ಲ!... ಇನ್ನು ಡಲ್ಲೇಸ್ ಸಮಾಚಾರ ಹೇಳ್ತೀನಿ. ಜಗಳಾಟ, ಕಚ್ಚಾಟ ತೊಡಗಿಸೋದು ಒಂದು ಮಹಾ ಪುಣ್ಯಕಾರ್ಯವೇ ಅಂತ ನನ್ನ ಭಾವನೆ. ಪ್ರಪಂಚದಲ್ಲಿ ಯುದ್ಧ ಗಳಾಗ್ತಾ ಇರಬೇಕು. 'ವಿನಾಶಕಾರ್ಯ ನಡೀತಾಲೇ ಇರಬೇಕು. ಇಲ್ಲದೆ ಇದ್ದರೆ 'reconstruction' 'ಪುನಾರಚನೆ' ಅಂಬೋ ಮಾತೆಲ್ಲಿ ಬರುತ್ತೆ. 'Aid' ಎಂಬ ಸೊಲ್ಲೆಲ್ಲಿ ಕೇಳುತ್ತೆ? ದುಸ್ಥಿತಿ ಇದ್ದರೆ ತಾನೆ ದುಡ್ಡು ಗಿಡ್ಡು ಸಹಾಯಮಾಡಿ ದೊಡ್ಡ ಮನುಷ್ಯ, ದೊಡ್ಡ ಜನಾಂಗ, ದೊಡ್ಡ ರಾಷ್ಟ್ರ ಅಂತ ಅನ್ನಿಸಿಕೊಳ್ಳೋದೆಲ್ಲ ಸಾಧ್ಯ? ದೀನರೇ ಇಲ್ಲದಿದ್ದರೆ ದೀನರಕ್ಷಕ ಅಂತ ಯಾರನ್ನ ಕರೆಯೋದು? ಅದಕ್ಕೇ ನೋಡು, ಆ ಭಗವಂತ ಕೂಡ ಆಗಾಗ ಬಿರುಗಾಳಿ, ಮಳೆ, ಭೂಕಂಪ ಅಂತ ಏನೇನೋ ಆಟ ನಡಸ್ತಿರ್ತಾನೆ. ಇನ್ನು ಡಲ್ಲೇಶ ಅಂಥದೇ ಆಟ ನಡೆಸೋದು ಹೆಚ್ಚೆ? ಅವನಿಗೂ ತನ್ನ ದೇಶಕ್ಕೆ ಒಳ್ಳೆ ಹೆಸರು ಬರಬೇಕಂತ ಆಸೆ ಇಲ್ವೆ? ಯುದ್ಧ ಗಳಾಗಬೇಕು. ನಾಲ್ಕು ದೇಶ ಪುಡಿಪುಡಿಯಾಗಬೇಕು. ಆಗ ಅಮೇರಿಕ ಡಾಲರು, ಟ್ರಾಕ್ಟರು, ಮದ್ದು ಮತ್ತೊಂದು ಅಂತ ದಾನಮಾಡಿ, ಎರವಲು ಕೊಟ್ಟು, ಆ ರಾಷ್ಟ್ರ ಗಳನ್ನ ಮತ್ತೆ ಕಟ್ಟಬೇಕು. ಹಾಗಾದರೆ ಮಾತ್ರ ಡಲ್ಲೇಶನ ರಾಷ್ಟ್ರದ ಔದಾರ್ಯ ಜಗತ್ತಿಗೆ ತಿಳಿಯುತ್ತೆ. ಆದ್ದರಿಂದಲೇ ಪಾಪ, ಆತ ತನ್ನ ಕೈಲಾದ್ದು ಮಾಡ್ತಿದಾನೆ. ಮೊನ್ನೆ ಆತ ಕೊಟ್ಟ 'statement' ಕೂಡ ಒಂದು 'ಗುಡ್ ಟರ್ನ್'. ಆತ ನಿಜವಾಗಿಯೂ ಒಳ್ಳೇ ಸ್ನ್ಯಾಕಟು ಅನ್ನೋದು ನಾನು ಅದಕ್ಕೇನೆ...."

"ಈಗರ್ಥವಾಯ್ತು ಕಣೋ"— ಎಂದು ಅವನನ್ನ ಕೊಂಚ ತಡೆ ಹಿಡಿದೆ. ಏಕೆಂದರೆ ಪ್ರಾಣೇಶ ಪ್ರೈಮರಿ ಸ್ಕೂಲಲ್ಲಿದ್ದಾಗ ನಡೆದ ಘಟನೆಯೊಂದು ಜ್ಞಾಪಕಕ್ಕೆ ಬಂತು. ಆತನೇ ಹಿಂದೊಮ್ಮೆ ಅದನ್ನ ನನಗೆ ಹೇಳಿದ್ದ.

ಒಂದು ದಿನ ಪ್ರಾಣೇಶ ಮಹಡಿ ಮೇಲೆ ಕಿಟಕಿ ಪಕ್ಕದಲ್ಲಿ ಕೂತುಕೊಂಡು ಗಾಳೀಪಟದ ಬಾಲ ರಿಪೇರಿಮಾಡ್ತಾ ಇದ್ದನಂತೆ. ಅವತ್ತು ಸಂತೆ. ಯಾರೋ ಒಬ್ಬಾತ ತಾನು ಕೊಂಡುಕೊಂಡಿದ್ದ ದೊಡ್ಡದೊಂದು ಮಣ್ಣಿನ ಗುಡಾಣಾನ ತಲೆ

ಮೇಲೆ ಹೊತ್ತುಕೊಂಡು ಬೀದೀಲಿ ಹೋಗ್ತಾ ಇದ್ದ. ಪ್ರಾಣೇಶನಿಗೆ ಅದರ ಮೇಲೆ ದೃಷ್ಟಿಬಿತ್ತು. ಇನ್ನೊಂದು ಕ್ಷಣದಲ್ಲಿ ಢಂ ಅಂತ ಏನೋ ಸದ್ದು! ಗುಡಾಣ ಧೊಪ್ಪಂತ ಕೆಳಗೆ ಬಿದ್ದು ಪುಡಿ ಪುಡಿ ಅದರೊಳಗಿದ್ದ ಸಾಮಾನೆಲ್ಲ ಬೀದಿ ಮೇಲೆ ಚೆಲ್ಲಾಪಿಲ್ಲಿ. ಪ್ರಾಣೇಶ ಮೆಟ್ಟಲಿಳಿದು ಕೆಳಕ್ಕೆ ಬಂದು-ಬೀದೀಲಿ ಬಿದ್ದಿದ್ದ ಸಾಮಾನು ಗಳನ್ನೆಲ್ಲ ಹೆಕ್ಕಿಬಿಟ್ಟು ಆ ಬಡಪಾಯಿಗೆ ಎತ್ತಿಕೊಟ್ಟು ಆತನಿಗೆ ಸಮಾಧಾನ ಹೇಳಿದ. ಗುಡಾಣ ಹೋಗಿದ್ದಕ್ಕೆ ಆತನಿಗೆ ದುಃಖವಾದರೂ ಈ ಪಿಲ್ಟುವಿನ ಗುಣ ನೋಡಿ ಸಂತೋಷವಾಗಿರಬೇಕು. ಈತನ್ನ ತುಂಬ ಹೊಗಳಿಬಿಟ್ಟು ಹರಸಿಹೋದನಂತೆ. ಆ ವಾರವೆಲ್ಲ ಗುಡ್ ಟರ್ನ್‌ಗೆ ಅವಕಾಶ ಸಿಗಲಿಲ್ಲ ಅಂತ ಪೇಚಾಡ್ತಿದ್ದ ಈ ಸ್ಕೌಟ್ ಮರಿಗಂತೂ ತುಂಬ ಸಂತೋಷವಾಯಿತು ಸ್ವಲ್ಪ ಹೊತ್ತು ಬಿಟ್ಟು, ಬೀದೀಲಿ ಯಾರೂ ಇಲ್ಲದ್ದನ್ನು ನೋಡಿ, ಈತ ಮಹಡಿಯಿಂದ ಗುಡಾಣಕ್ಕೆ ಎಸೆದಿದ್ದ ಗವರ್ ಬಾಟಲ್ ಚರಂಡಿಯಲ್ಲಿದ್ದಿದ್ದನ್ನು ಹುಡುಕಿ ತಂದು ಒಳಗಿಟ್ಟನಂತೆ. ಆದರೆ ಈ ವಿಷಯ ಹೇಗೋ ಪತ್ತೆಯಾಗಿ ಅವನ ತಂದೆ ಚೆನ್ನಾಗಿ ನಾಲ್ಕು ಹೇರಿದರು ಕೊನೆಗೆ.

ಅದು ಹೇಗೂ ಇರಲಿ; ಈತ ಒಂದು ಗುಡ್ ಟರ್ನ್ ಸಂಪಾದಿಸಿದ್ದು ಮುಖ್ಯ. "ಡಲ್ಲೇಶನ ಗುಡ್ ಟರ್ನ್ ಕೂಡ ಅದೇ ನಮೂನೆಯದು ಅಲ್ಲವೆ?"—ಅಂತ ಕೇಳಿದೆ. "ಆದರೆ ನೀನು ಗುಡ್ ಟರ್ನ್ ಸಂಪಾದಿಸಿದ್ದಕ್ಕಾಗಿ ಸಂಭಾವನೆ ಕೊಡೋದಕ್ಕೆ ನಿಮ್ಮಪ್ಪ ಇದ್ದರು ಈ ಡಲ್ಲೇಶನಿಗೆ ಯಾರು ಬಹುಮಾನಿಸುತಾರೋ ಕಾಣೆ" ಎಂದೆ. "ಡಲ್ಲೇಶನಿಗೆ ಇನ್ಯಾರು ಕೊಡಬೇಕು? ಅವನ ಅಪ್ಪಂದಿರು.... ಅಂದರೆ, ಅಮೇರಿಕದ ಜನಗಳು ಕೊಟ್ಟರೆ ಕೊಡಬೇಕು ಸಂಭಾವನೆ"—ಎಂದುಬಿಟ್ಟು ಪ್ರಾಣೇಶ ಮತ್ತೆ ತನ್ನ 'ನೋವೋಕಿಲ್' ಪ್ರಪಂಚದಲ್ಲಿ ಮುಳುಗಿದ.

—ರಾಮಿ.

ಆಸ್ಪತ್ರೆಯ ನರ್ಸುಗಳು ಸಾಮಾನ್ಯವಾಗಿ ರೋಗಿಗಳನ್ನೇ ಮದುವೆಯಾಗು ತ್ತಾರೆ, ಡಾಕ್ಟರುಗಳನ್ನಲ್ಲ! ಎಂದು ಒಬ್ಬರು ಟೀಕಿಸಿದ್ದಾರೆ.

ರೋಗಿಗಳ ವಿಷಯಗಳೆಲ್ಲಾ ನರ್ಸುಗಳಿಗೆ ಪೂರ್ಣ ತಿಳಿದಿರುವುದು, ಹಾಗೂ ಡಾಕ್ಟರುಗಳ ವಿಷಯ ಅಷ್ಟಾಗಿ ತಿಳಿಯದೇ ಇರುವುದೂ ಇದಕ್ಕೆ ಕಾರಣವಿರಬಹು ದಲ್ಲವೇ?

*   *   *

ವಿಜ್ಞಾನ ವಿಚಾರ ವಿಹಾರ

ಹಿಂದೊಮ್ಮೆ ಯಾರೋ ಒಬ್ಬರು ಕ್ಷೊಂಕಣವನ್ನು ಸುತ್ತಿ ಮೈಲಾರಕ್ಕೆ ಹೋದರಂತೆ. ಅವರನ್ನು ಇನ್ನೂ ಆಕ್ಷೇಪಿಸಿ ತೆಗಳುತ್ತಿದ್ದೇವೆ ನಾವೆಲ್ಲ. ಈಗಲಾದರೋ, ಬಂಗಾಳ ಸುತ್ತಿ ಬೊಮ್ಮನಹಳ್ಳಿಗೆ ಬರುತ್ತಿದ್ದಾರೆ ಎಲ್ಲರೂ. ಆದರೆ ಅವರೆಲ್ಲ ಮಾನವ ಕುಲೋದ್ಧಾರಕರು ವಿಜ್ಞಾನಿಗಳು ಎಂದು ಪ್ರಸಿದ್ಧರಾಗಿದ್ದಾರೆ.

ನಮ್ಮ ಐನ್ಸ್ಟೀನನನ್ನೇ ತೆಗೆದುಕೊಳ್ಳಿ. ಅವನೇನೋ ಎಚ್ಚರದಪ್ಪಿ ಸಾಪೇಕ್ಷವಾದ, ಏಕಕ್ಷೇತ್ರ ಪ್ರಮೇಯಗಳನ್ನು ಕಂಡುಹಿಡಿದೆ ಎಂದು ಹೇಳಿದ. ಹೌದು! ಶಹಭಾಸ್! ಜಾಗು! ಭಾಪುರೆ ಎಂಧು ಮಾನವ ಕುಲವೇ ಕೂಗಿಬಿಟ್ಟಿತು. ನೆಹರೂ ತಂದ ಮಸೂದೆ ಕಾಂಗ್ರೆಸ್ ಸಭೆಯಲ್ಲಿ ಪಾಸಾದಂತೆ ಸಾಪೇಕ್ಷವಾದವೂ ಪಾಸಾಯಿತು.

ಮಸಲಾ! ಐನ್ಸ್ಟೀನನು ಪೂರಾ ತಿಳಿದಿದ್ದನೇ ಈ ರಿಲೆಟಿವಿಟಿಯನ್ನು? ಅಥವಾ ಯಾರಾದರೂ ಎಂದಾದರೂ ಅದನ್ನು ಕಂಡಿದ್ದರೆ? ಎಲ್ಲಿಂದ ಬಂತು? ಎಲ್ಲಿಗೆ ಹೋಗಲಿದೆ ಇದು?

ರಿಕ್ಕೀ ಎಂಬ ಇಟಲಿಯ ಲೆಕ್ಕಿಗನ ಎನ್ ಡೈಮನ್ಷನಲ್ (ಸ. ಕ. ಭಾಷೆಯಲ್ಲಿ 'ನಗಾತ್ರ') ಲೆಕ್ಕ, ಐನ್ಸ್ಟೀನನ ನೂರಾರು ಭ್ರಾಂತಿಗಳು, ಎಲ್ಲವೂ ಸೇರಿ ಈ ರಿಲೆಟಿವಿಟಿಯ ಕಲಸುಮೇಲೋಗರ ಹುಟ್ಟಿತು. ಫಸ್ಟ್ ಮತ್ತು ಸೆಕೆಂಡ್ ಅಪ್ರಾಕ್ಸಿಮೇಷನುಗಳೆಂಬ ಅಂದಾಜುಗಳಿಂದ ಇದು ಹುಟ್ಟಿತಂತೆ. ಹೀಗೆ ವರ್ಷಗಟ್ಟಲೆ ತಲೆ ಕೆರೆದ ಈ ಪ್ರಾಣಿಯ ಸ್ವಕಪೋಲದಿಂದ $E=Mc^2$ ಎಂಬ ಸಮೀಕರಣ ಉದ್ಭವಿಸಿತು. ಅದರ ಮರೆಯಲ್ಲಿ ಸಾವಿರಾರು ಜನ ಹೊಟ್ಟೆಹೊರೆದುಕೊಳ್ಳುತ್ತಿದ್ದಾರೆ ಎಂಬುದು ಇಲ್ಲಿ ಅಪ್ರಸ್ತುತ.

ಪಿ.ಎಚ್.ಡಿ.; ಡಿ.ಎಸ್ಸಿಗಳೂ ಅದನ್ನು ಅರಗಿಸಿಕೊಳ್ಳಲಾರದೆ ಹೋಗಿದ್ದಾರೆ.

ನಾನು ಯಾವ ರಗಳೆಯೂ ಇಲ್ಲದೆ $E=Mc^2$ ಎಂಬ ರಹಸ್ಯವನ್ನು ಬಿಡಿಸಿದ್ದೇನೆ. ಸ್ವಬುದ್ಧಿಯಿಂದ E (ಇ) ಎಂದರೆ ಚೈತನ್ಯ. ಇದು ಯಾವುದಕ್ಕೆ ಸಮ? Mc^2 ಗೆ. ಎಂ, ಎಂದರೆ ಮಸಾಲೆದೋಸೆ, ಇಂಟು ಸಿ ಎಂದರೆ ಕಾಫಿ ಇಂಟು ಸಿ ಎಂದರೆ ಸಿಗರೇಟು.

ಇನ್ನೊಮ್ಮೆ ಹೇಳುವಾ. ಚೈತನ್ಯ = ಮಸಾಲೆ × ಕಾಫಿ × ಸಿಗರೇಟು. ಇದನ್ನು ತಿಳಿಯಲು ಕಾಲೇಜಿನ ಮೆಟ್ಟಿಗಲ್ಲು ಹತ್ತುವ ಅವಶ್ಯಕತೆ ಸಹ ಇಲ್ಲ.

ಇನ್ನು ಅತಿ ಪುರಾತನ ಶುದ್ಧಸಂಖ್ಯೆಗಳಲ್ಲಿ ಒಂದಾದ Π (ಪೈ) ಎಂಬುದರ ಬೆಲೆ ಏನು ಎಂಬುದನ್ನು ಸ್ವಲ್ಪ ವಿಮರ್ಶಿಸೋಣ. ಇದರ ಬೆಲೆಯ ಪತ್ತೆಮಾಡಲು ಯಾರಿಗೂ ಆಗಿಲ್ಲ ಎಂದು ವಿಜ್ಞಾನಿಗಳು ಹೇಳುತ್ತಾರೆ. ವೃತ್ತದ ವ್ಯಾಸದಿಂದ ಪರಿಧಿಯನ್ನು ಭಾಗಿಸಬೇಕಂತೆ. ಆಗ ಬರುವ $\frac{22}{7}$ ಅಥವಾ 3·14159........ ಇತ್ಯಾದಿಯೇ ಪೈಯಂತೆ. ಅದೂ ಹೆಚ್ಚು ಕಡಿಮೆ, ಸುಮಾರು........ಇತ್ಯಾದಿ ಗೊಣಗು ಮಾತುಗಳು. ಯಾವ ಸಮೀಕರಣ, ಟೆಕ್ಸ್ಟ್ ನೋಟ್ಸ್‌ನಲ್ಲಿ ನೋಡಿದರೂ ಈ Πಯ ಗಲಾಟೆ. ಅದನ್ನು ಕಂಡರೆ ಎಲ್ಲರಿಗೂ ನಡುಕ. ನೂರುಗಟ್ಟಲೆ ಪುಟದಲ್ಲಿ ಗುಣಿಸಿದರೂ ಅದು ನಿಷ್ಕರ್ಷೆಯಾಗದು.

ಪೈ ಬೆಲೆ ಎಷ್ಟು (ಅಥವಾ ಏನು)? ಎಂಥಾ ಮೂರ್ಖ ಪ್ರಶ್ನೆ. ಪೈಗೆ, ರೂಪಾಯಿ, ನಾಲ್ಕಾಣೆಯ ಬೆಲೆ ಇರಲಿ, ಮೂರು ಕಾಸಿನ ಬೆಲೆಯೂ ಇಲ್ಲ. ಕೊನೆಗೆ ದುಗ್ಗಾಣಿ ಬೆಲೆಯೂ ಇಲ್ಲ. ದೋಸೆ ಕಾಫಿಗಳಂತಿರಲಿ ಒಂದು ಬಕ್ಷೀಸಯೂ ಸಿಕ್ಕದು. ಪೈಗೆ ಒಂದು 'ದಿಲ್ ಬಹಾರ್' ಬೀಡಿ ಮಾತ್ರ ಸಿಕ್ಕೀತು.

ಪೈ ಬೆಲೆಯೇನು? ಬರೆದೇ ಬರೆದರು, ಚರ್ಚೆ ಮಾಡಿಯೇ ತಲೆ ಕೆಡಿಸಿಕೊಂಡರು. ಪೈ ಎಂದರೆ ಏನು ರೂಪಾಯಿ ಇದ್ದೀತೇ ಎಂಬ ಭ್ರಮೆ ಅವರಿಗೆ. ಪೈ ಬೆಲೆ ಒಂದು ಕುರುಡು ಕಾಸು. ಈಗಲಾದರೂ ತಿಳಿಯಿತೋ. ಅದಕ್ಕೇ ಪಂಚತಂತ್ರದಲ್ಲಿ ಹೇಳಿದ್ದು,

> Scholarship is less than sense
> Therefore seek intelligence

—ಅ. ರಾ. ಸೇ.

ರಾ. ಪು. ವಿ. ಸಮಿತಿಯ ಆಯೋಗಗಳಲ್ಲಿ, ನಮ್ಮ ಹಲವಾರು ಚಿಲ್ಲರೆ ನಾಯಕರು ಆ ಭೋಗ ನಡೆಸಿಕೊಂಡು ದೆಹಲಿ ಕಾಶಿ ಆಗ್ರಾ ಎಲ್ಲವನ್ನು ನೋಡಿಕೊಂಡು ಬಂದರಂತೆ.

* * *

ಡೊಂಕುಬಾಲ

ಹೋಗ್ಲಿ,
ಹೋಗ್ಲಿ,
ಹೋದ್ರೆ ಹೋಗ್ಲಿ!
ಮಾನ ಮರ್ಯಾದೆ.

ಬರ್ಲಿ,
ಬರ್ಲಿ,
ಬಂದ್ರೆ ಬರ್ಲಿ!
ಅಪಖ್ಯಾತಿ ಕೆಟ್ಟಹೆಸರು.

ಸೇರ್ಲಿ
ಸೇರ್ಲಿ
ಸೇರಿದರೆ ಸೇರ್ಲಿ
ಕೊಡಗು, ಮಂಗಳೂರು–ಕರ್ನಾಟಕ ಆಗ್ಲಿ.

ಆದ್ರೆ,
ಆಗ್ಲಿ!
ಉಗೀಲಿ!
ಬಯ್ಯಲಿ!
(ಪೇಪರಿಗೆ) ಬರೀಲಿ!
ಶಂಖವಾದ್ಯ ಮಾಡ್ಲಿ
ನಾನು ಮಾತ್ರ ಕವನ ಬರ್ಯೋದು ಬಿಡುಲ್ಲ!

—ಶಾ. ರಾ.

ಚರ್ಮಗಳನ್ನು ಹೊಲಿಯುವ ಶಸ್ತ್ರವೈದ್ಯನಿಗೆ ಕನಿಕರ ಹೇಗೆ ಬರುತ್ತದೆ ಎಂದು ಒಬ್ಬರು ಕೇಳಿದ್ದಾರೆ—

—ಹೊಲಿಯುವ ಸೂಜಿ ಅವರ ಬೆರಳಿಗೆ ತಾಕಿದಾಗ ಎಂದು ನಾವು ಹೇಳಬಹುದಲ್ಲವೇ?

* * *

ಬೋರಿಂಗ್ !

ಕುಮಾರ ಸ್ವಾಮಿಯ ಲೆಕ್ಚರ್
ಬರೀ ಬೋರಿಂಗ್ !
ಸುಕುಮಾರ ಸ್ವಾಮಿಯ ಕಥೆಯೂ
ಬೋರಿಂಗ್ !

ರಂಗಾಚಾರಿಯ ಡೆಲ್ಟ ತೀಟೆ !
ಅಚ್ಯುತರಾಯನ ಎಲ್ಟ ಮಾಲ್ಟ !
ಸತ್ತನಾ ಅಶ್ವತ್ಥಾಮನ್ !
(ಅಮೆನ್ ! ಅಮೆನ್ !)
ಕಿರುಚುವ ಅನಂತ ರಂಗನ್
ಶಿಂಗ್ರಾಚಾರಿಯ P. Q. R. S.
ಬ್ರೇಕೇ ಇಲ್ಲದ ಮಾರಿಸ್ !
MNH_3 CH_4 OH—
ಬೈರಿಗೆ ಹಿಡಿಯುವ ಹುಚ್ಚಪ್ಪ ಹೆಚ್. ಹೆಚ್. !

ಏನ್ ಅಖಂಡ ಸೃಷ್ಟಿ, ಭ್ರಹ್ಮನ
ಬೋರಿಂಗ್ !
ಹೋಟೆಲ್ ಬಿಲ್ಲು, ಅಯ್ಯರ
ಬೋರಿಂಗ್ !
T. P. Actಉ ಬಲು ಬೋರಿಂಗ್ !

—ಹಾ. ರಾ.

ಅಮೇರಿಕಾಕ್ಕೂ ಭಾರತಕ್ಕೂ ಬಹಳ ಹತ್ತಿರ ಸಂಬಂಧವಿದೆಯಂತೆ —ಅಲ್ಲಿನ ಗೋಲ್ಡ್ ಡಿಗ್ಗರ್ಸ್ ಅವರನ್ನು ಇಲ್ಲಿ ಬಂಗಾರದವರು ಎಂದನ್ನುತ್ತಾರೆ ಅಲ್ಲವೇ?

* * *

ಪರಶುರಾಮನ ಅಪರಾವತಾರ ಈ ಕುಂಜ್ರು ಸಮಿತಿ ಎಂದು ಜಾಮ್‌ನಗರದ ವೀರಕ್ಷತ್ರಿಯರು ಅಂದರಂತೆ.

* * *

"ಸ್ವಯಂ-ಕೃತ"

ಮೈಸೂರಿನಲ್ಲಿ ವಸ್ತು ಪ್ರದರ್ಶನಾಲಯಕ್ಕೆ ದಂಪತಿಗಳು ನಾವು ಹೋದೆವು. ಎಲೆಕ್ಟ್ರಿಕ್ ಸಾಮಾನುಗಳಿದ್ದ ಅಂಗಡಿಯ ಹತ್ತಿರ ಶೀಲು ಅರ್ಧಗಂಟೆ ಕಾಲ ಕಳೆದಳು. "ನೋಡಿ! ಅಂದ್ರೆ! ಚಿನ್ನದ ವಂಕಿ ಚಂಗಮ್ಮನ ಮನೆಯಲ್ಲಿ ಇದೇ ತರಹಾ ಸ್ಟೌವಿದೆ ಅಂದ್ರೆ. ಬಲು ಸುಲಭವಾಗಿ ಅಡಿಗೆ ಮಾಡಬಹುದಂತೆ! ತಳುಕಿನ ತೆಂಗಿನಮರದ ತಂಗಮ್ಮನ ಮನೆಯಲ್ಲಿ ಇಂತದೇ ಇಸ್ತ್ರಿಪೆಟ್ಟಿಗೆ ಇದೆ ಅಂದ್ರೆ! ರೇಷ್ಮೆ ಜರಟು ಮುಗುಟ ಸೀರೆಗಳು ಎಲ್ಲವನ್ನೂ ನಾವೇ ಇಸ್ತ್ರಿಮಾಡಬಹುದು ಅಂದ್ರೆ. ಬಟ್ಟೆಗಳೂ ಬಾಳಿಕೆ ಬರುತ್ತವೆ. ಇವೆರಡನ್ನೂ ಕೊಂಡುಕೊಳ್ಳೋಣ ಅಂದ್ರೆ!" ಎಂದು ಹೇಳಿದಳು ನನ್ನ ಮುಖವನ್ನೇ ನೋಡುತ್ತಾ! ಮುಗ್ಧ ಮಂದಹಾಸ ಮುಖದಲ್ಲಿ. ಆದರೂ ಸುಮ್ಮನೆ ಮೂವತ್ತು ನಲವತ್ತು ರೂಪಾಯಿ ಪೀಕಲು ನಾನು ಸಿದ್ಧವಿತ್ತಿಲ್ಲ. ನನ್ನಾಕೆಗೆ ನಾನಿತ್ತ ಮಾತೇನು? ದಸರಾ ವಸ್ತುಪ್ರದರ್ಶನಕ್ಕೆ ಕರೆದುಕೊಂಡು ಹೋಗುತ್ತೇನೆ ಎಂದು. ಅಷ್ಟೇ! ಅಲ್ಲವೇ?

ಆದರೆ ಆ ಹೊತ್ತಿಗೆ ಅಂಗಡಿಯವನು "ಸಾರ್! ಈ ಸ್ಟೌವು, ಈ ಇಸ್ತ್ರಿಪೆಟ್ಟಿಗೆ ಬಲು ಗಟ್ಟಿ ಗಡತವಾದುವು. ಬಾಳಿಕೆ ಬರುವಂತಹವು. ಆಗಿಂದಾಗ್ಯೆ ರಿಪೇರಿಗೆ ಹೋಗುವ ಗೋಜಿರುಲ್ಲ" ಎಂದು ಹೇಳಿದ.

"ಎಲಾ! ಇವನ! ನಾನು ಫಿಸಿಕ್ಸ್ ಎಂ.ಎಸ್.ಸಿ. ಫಸ್ಟ್‌ಕ್ಲಾಸ್, ಈಗೇನೋ ಅಕೌಂಟೆಂಟ್ ಆಗಿರಬಹುದು, ಆದರೂ ಈ ಸ್ಟೌವು, ಈ ಇಸ್ತ್ರಿಪೆಟ್ಟಿಗೆಗೆ ಬೇಕಾಗು ವಷ್ಟು ಎಲೆಕ್ಟ್ರಿಸಿಟಿ ಜ್ಞಾಪಕ ಇಲ್ಲವೇ? ಎಂದು ರೇಗಿತು. ರೇಗಿದ ಗಂಡಸು ನಷ್ಟ ಹೊಂದದೇ ಇರುವುದು ಸಾಧ್ಯವೇ?

ಸ್ಟೌವಿನ ಪೆಟ್ಟಿಗೆ, ಇಸ್ತ್ರಿ ಪೆಟ್ಟಿಗೆ ಹೊತ್ತುಕೊಂಡು ನಾನು, ರಸೀತಿಗಳನ್ನು ಹೊತ್ತುಕೊಂಡು ಶೀಲು, ಹಿಂತಿರುಗಿದೆವು.

"ಏನೇ! ಶೀಲೂ! ಇವತ್ತು ಶನಿವಾರ ಬೆಳಿಗ್ಗೆ ಕಚೇರಿ ಅಂತ ಗೊತ್ತಿದ್ದೂ ಕಾಫಿ ಕೊಡಲು ಇಷ್ಟು ಹೊತ್ತಾದರೆ ಹೇಗೇ!" ಎಂದು ಕೂಗಿದೆ.

ಕಾಫಿ ತಂದುಕೊಡುತ್ತಾ "ಹಸಿ ಸೌದೆ ಅಂದರೆ ಬೇಗ ಒಲೆ ಹತ್ತಲಿಲ್ಲ" ಎಂದು ಶೀಲು ಹೇಳಿದಳು. ಅವಳ ಕಣ್ಣು ಕೆಂಪಗೆ ನೀರಾಡುತ್ತಿದ್ದುವು. ನನಗೆ

ಮರುಕವಾಯ್ತು. "ಯಾಕೇ! ಸ್ಟೌವ್ ಏನಾಯ್ತೆ" ಅಂದೆ. "ಅದೇನೋ ಕೆಟ್ಟು ಹೋಗಿದೆ ಅಂದ್ರೆ. ನಿಮಗೆ ಹೇಳಿದರೆ ಇನ್ನು ರಿಪೇರಿಗೆ ಬೇರೆ ದಂಡ ಅಂತ ರೇಗ್ತೀರೇನೋ ಅಂತ ಸುಮ್ಮಗಿದ್ದೆ"ಎಂದಳು ಗದ್ಗದ ಕಂಠೆ.

"ಮೊದಲೇ ಯಾಕೆ ಹೇಳಬಾರದಿತ್ತು! ಹೋಗಲಿ ಬಿಡು. ಈ ದಿನ ಮಧ್ಯಾಹ್ನ ಹೇಗೂ ರಜಾ ಇದೆ. ನಾನೇ ರಿಪೇರಿಮಾಡ್ತೇನೆ" ಎಂದು ಹೇಳಿ ಕಾಫಿ ಕುಡಿದು ಕಚೇರಿಗೆ ಹೋದೆ.

ಮನೆಗೆ ಬರುವಾಗ ಒಂದಿಷ್ಟುಫ್ಯೂಜ್ ವೈರ್, ಒಂದು ಇಕ್ಕಳ, ಒಂದು ಸ್ಕ್ರೂ ಡ್ರೈವರು, ಇತ್ಯಾದಿ ಸಲಕರಣೆಗಳನ್ನೆಲ್ಲಾ ತಂದೆ.

ಊಟಮಾಡಿ ವಿಶ್ರಮಿಸಿಕೊಂಡು ಮೂರು ಗಂಟೆಗೆ ಎದ್ದು ರಿಪೇರಿ ಕಾರ್ಯ ಕ್ರಮಕ್ಕೆ ಶುರುಮಾಡಿದೆ. ಶೀಲು ಅಂದಳು "ನೀವು ಯಾಕೆ ತೊಂದ್ರೆ ತೊಗೋತೀರಿ ಅಂದರೆ—ಒಂದು ರೂಪಾಯಿ ಬಿಸಾಕಿದರೆ ಯಾರಾದರೂ ಮಾಡಿಕೊಡುತ್ತಾರೆ." ಅಂತ. ಹಾಗಲ್ಲ ಕಣೆ, ತಾನು ಮಾಡುವುದು ಉತ್ತಮ. ಮಗ ಮಾಡುವುದು ಮಧ್ಯಮ, ಆಳುಮಾಡುವುದು ಹಾಳು" ಗೊತ್ತಿಲ್ಲವೇ" ಎಂದೆ.

"ನಿಮಗೆ ಇದೇನು ಮಹಾ ಕೆಲಸ ಅಂದ್ರೆ! ಆದರೂ ನೀವೇ ತಕಲಿಯಲ್ಲಿ ನೂತು ಅದರಲ್ಲೇ ಜನಿವಾರಮಾಡಿ ಅದನ್ನೇ ಹಾಕಿಕೊಂಡರೆ ಶ್ರೇಷ್ಠ ಎಂದು ಹೋದಸಾರಿ ಹಠಹಿಡಿದು, ತಕಲಿ ತಂದು, ಮೂರು ಪಾರ ನೂತು, ಕಡೆಗೆ ಉಪಾ ಕರ್ಮದ ದಿನ ಪುರೋಹಿತರೆದುರಿಗೆ ನೀವು ತಯಾರಿಸಿದ ಹೊಸ ಜನಿವಾರ ಹಿಸಿದು ಹೋದದ್ದು ಜ್ಞಾಪಕ ಬಂತು ಅಷ್ಟೇ!" ಅಂದಳು. ಶೀಲೂ ಜ್ಞಾಪಕಶಕ್ತಿ ಅಸಾ ಧಾರಣದ್ದು. ರಾಕ್ಷಸೀ ನೆನಪು. ಮಾನವ ನೆನಪಂತು ಖಂಡಿತ ಅಲ್ಲ!

ಸ್ಟೌ ಎದುರಿಗಿರಿಸಿಕೊಂಡೆ. ಬಲಗಡೆ ರಿಪೇರಿ ಸಾಮಾನೆಲ್ಲವನ್ನೂ ಅಣಿ ಮಾಡಿಟ್ಟುಕೊಂಡೆ. "ಓಂ ಸುಮುಖಾಯನಮಃ" ಎಂದು ಮನಸ್ಸಿನಲ್ಲೇ ಗಣೇಶನ ಪ್ರಾರ್ಥನೆಮಾಡಿದೆ. ಆಗಲೇ ಮನಸ್ಸಿನಲ್ಲಿ ಅಳುಕಿತು. ಈ ಮುಖವನ್ನು "ಸುಮುಖಾಯನಮಃ" ಎಂದು ಹೇಗೆ ಅಂದರು ಅಂತ.

ಮೊದಲು ಸ್ಟೌವಿನ ಸ್ವಿಚ್ಚಿನ ದೊಡ್ಡದಾಗಿ ಕಂಡುಬಂದ ಸ್ಕ್ರೂಗಳನ್ನೆಲ್ಲಾ ಕಳಚಿ ಎಡಗಡೆಗಿಟ್ಟೆ. ತಂತಿಯನ್ನು ಸುರುಳಿಸುತ್ತಿ ಲೋಹದ ಗೂಟಕ್ಕೆ ಸೇರಿಸಿದ್ದರು. ಅದನ್ನೂ ಕಳಚಿದೆ. ಅದರ ಸ್ಕ್ರೂಗಳನ್ನೂ ತೆಗೆದಿಟ್ಟೆ. ಆಗ ಕಾಣಿಸಿತು, ಸ್ಟೌಗೆ ಹೋಗುವ ತಂತಿ, ಸ್ಟೌವಿನ ಕಾಯುವ ತಂತಿಯು ಸಂಬಂಧವನ್ನು ಕಳಚಿಕೊಂಡಿದ್ದುದು! ಜಯ ಬಲಭೀಮ! ಎಂದು ತೊಡೆತಟ್ಟಿದೆ. ಕೈ ಮತ್ತು ತೊಡೆ ಎರಡೂ ಉರಿಯ ಲಾರಂಭಿಸಿದರೂ ಹೆಚ್ಚು ನೋವಾಗಲಿಲ್ಲ. ಆ ಶಬ್ದದ ಜೋರಿಗೆ ಶೀಲು ಒಳಗಿನಿಂದ

ಬಂದಳು. "ಏನಾಯ್ತು ಅಂದ್ರೆ!" ಅಂತ ವಿವಾ ಮೊಬಲಗು ಬರುವ ಕರ್ಕಶ ದನಿಯಲ್ಲಿ ಕೇಳಿದಳು.

"ನೋಡೇ ಇಲ್ಲಿ! ಈ ತಂತಿ ಆ ತಂತಿಯು ಸಂಬಂಧ ಹರಿದುಹೋಗಿದೆ. ಅದಕ್ಕೇ ಈ ಸ್ಟೌವು ವಿತಂತುವಾಗಿದೆ" ಎಂದು ನಿದರ್ಶಿಸಿದೆ. ಎಂತಹ ಜಾಣರ್ರೀ! ನೀವು ಎಂದು ಮೆಚ್ಚಿನ ಮಂದಹಾಸ ಬೀರಿದಳು.

ಆ ಹರಿದ ಸಂಬಂಧವನ್ನು ತೇಪೆ ಹಾಕಿ ಒಂದು ಮಾಡಿದೆ. ತಿರುಗಿ ಮೊದಲಿದ್ದಂತೇ ಎಲ್ಲವನ್ನೂ ಸರಿಗೂಡಿಸಿದೆ.

ಆದರೆ ರಿಪೇರಿಯೆಲ್ಲಾ ಆದಮೇಲೆ, ಮೂರು ಸ್ಕ್ರೂ ಮತ್ತೊಂದು ಚಿಲ್ಲರೆ ಲೋಹದ ತೂತಿದ್ದ ತುಣುಕು, ಒಂದು ಬೆಣಚುಕಲ್ಲಿನ ಬೊಂಬೆ ಆಟದ ಸಾಮಾನು, ಇಷ್ಟು ಮಿಕ್ಕಿಹೋಯ್ತು.

"ನೋಡೇ ಲೇ! ನಾವೇ ರಿಪೇರಿ ಮಾಡಿದರೆ ಎಷ್ಟು ಉಳಿತಾಯ! ಬಕರಗಳು ಬಂದವು ಅಂತ ನಮ್ಮನ್ನು ಅಂಗಡಿಯವರು ಸುಲಿಗೆ ಮಾಡ್ತಾರೆ. ನಾವೇ ಮಾಡಿ ಕೊಂಡರೆ ಎಷ್ಟು ಸುಲಭ" ಎಂದು ಸಿಂಹಿಣಿಯು ಮುಂದೆ ಸಿಂಹವು ಗಡ್ಡಮೀಸೆ ತಿರುವುವಂತೆ ಇಲ್ಲದ ಮೀಸೆಯನ್ನೇ ನಾನು ತಿರುವಿದೆ.

ಸ್ಟೌವಿನ ಪ್ಲಗ್ಗನ್ನು ಹಾಕಿದೆ. ಈಗ ಹೋಗಿ ಮೈನ್ ಸ್ವಿಚ್ ಹಾಕು ಎಂದು ಹುಕುಂಮಾಡಿದೆ.

ಶೀಲು ವರಾಂಡಾಕ್ಕೆ ಹೋಗಿ ಮೈನ್ ಸ್ವಿಚ್ ಹಾಕಿದಳು. ನಾನು ಸ್ಟೌವಿನ ಎದುರಿಗೆ ಕುಳಿತಿದ್ದೆ. ಸ್ಟೌವಿನ ಅಂಚಿನಲ್ಲಿ ಒಂದು ಮಿಂಚು ಹೊಡೆದಹಾಗಾಯ್ತು. ಕೂಡಲೆ ಒಂದು ಶಬ್ದವಾಯ್ತು. ಕುಕ್ಕುರಗಾಲಿನಲ್ಲಿ ಕೂತಿದ್ದ ನಾನು ಅದೇ ಆಸನ ದಲ್ಲಿ ಮೂರಡಿ ಇರಬಹುದು, ಅಷ್ಟೆತ್ತರ ಹಾರಿದೆ. ವಿಶ್ವದಲ್ಲೇ ಯಾರೂ ಈ ರೀತಿ ಕುಕ್ಕರಗಾಲಿನಲ್ಲಿ ಕೂತು ಹಾಗೆಯೇ ಇಷ್ಟು ಎತ್ತರ ಹಾರಿದುದು ವರದಿಯಾ ಗಿರಲಿಕ್ಕಿಲ್ಲ!–ವೋಡ್‌ಹೌಸನನ್ನು ಹೊರತು—

ಶಬ್ದವನ್ನು ಕೇಳಿ ಹರಿಣಿಯು ವೇಗದಿಂದ ಶೀಲು ನಡುಮನೆಗೆ ಬಂದಾಗ ನೆಲದ ಮೇಲೆ ಮೂರಡಿ ಎತ್ತರದಲ್ಲಿ ನಾನು ಕುಕ್ಕರಗಾಲಿನಲ್ಲಿ ಗಾಳಿಯ ಮೇಲೆ ಅರಕ್ಷಣ ಕೂತಿದ್ದೂ, ನಂತರ ಅವಳ ಕಣ್ಣೆದುರಿಗೇ ಧೊಪ್ಪಂತ ಬಿದ್ದಿದ್ದೂ, ಎರಡನ್ನೂ ನೋಡಿದಳು.

ಓದಿದ ಹೆಂಗಸಾದರೆ ತಾನೇ ಏನು? ಸ್ವಂತ ಗಂಡನಿಗೆ ಹೀಗೆ ಅಪಘಾತ ವಾದರೆ ನಗಲಾರಂಭಿಸಬಹುದೇ? ಆ ಮಂದಹಾಸ ಅಂದೆನಲ್ಲಾ ಆ ಮುಖ ಈಗ

ವಿಕಟಹಾಸ್ಯದ ರಾಕ್ಷಸೀ ನಗುಮುಖವಾಗಿತ್ತು. ಕಿವಿಯಿಂದ ಕಿವಿಯತನಕ ತೆರೆದ ಬಾಯಿ. ಅದೇನು ಚೂಪಾದ ಹಲ್ಲುಗಳು ಅಂತೀರೀ! ದಂತವಕ್ರ! ಅದಕ್ಕೂ ಚೂಪಾದ ಕೆಂಪೇರಿದ ನಾಲಿಗೆ, ಮೊಗವಂತೂ ತಾಟಕಿಯು, ಹಾಲುಣಿಸುವಾಗ ತೋರುತ್ತಿದ್ದ ಸಂತಸದ ಮೊಗ.

ನೋಡಿ ನಕ್ಕಳು! ನಗುವನ್ನು ನೋಡಿ ಕೂತ ನೆಲದಿಂದ ಹಿಡಿದು, ಕ್ರಾಪಿನ ತುದಿಯವರೆಗೆ ಕೋಪವೇರಿತು ನನಗೆ. ತಪ್ಪಿದ ಗಂಡನ ಕೋಪ ತಪ್ಪದೆ ಹೆಂಡತಿಯ ಮೇಲಲ್ಲವೇ?

ಆಗ್ನೇಯಾಸ್ತ್ರವನ್ನೇ ಕಣ್ಣಿನಿಂದ ಶೀಲು ಮೇಲೆ ಹಾರಿಸಿದೆ! ಶೀಲುವಿನ ಕಂಗಳಲ್ಲಿ ವಾರುಣಾಸ್ತ್ರದ ಮೊದಲ ಹನಿ ಬಂದಿತ್ತೇ ಏನೋ? ಅಷ್ಟುಹೊತ್ತಿಗೆ ಬಾಗಿಲಲ್ಲಿ ನಾಲ್ಕಾರು ಜನ ಬೋಲಬೋಲ ಮಾಡಿದರು. ನೋವಾದ ಕಡೆ ತಡವರಿಸಿಕೊಳ್ಳುತ್ತಾ ಹೊರಬಾಗಿಲು ತೆಗೆದು ನೋಡುತ್ತೇನೆ? ಆ ರಸ್ತೆಯ ನಿವಾಸಿಗಳೆಲ್ಲಾ, ಅರ್ಧಂಬರ್ಧ ಉಡುಪಿನಲ್ಲೇ ನಮ್ಮ ಮನೆಗೆ ದಂ ಕಟ್ಟಿ ಓಡಿಬಂದಿದ್ದಾರೆ.

"ಏನಾಯ್ತು! ರಾಯರೇ! ನಿಮ್ಮ ಮನೇಲಿ ಸಿಡಿಲುಬಡಿಯಿತೇ? ಏನದು! ಅಘೋರ ಶಬ್ಧ" ಎಂದಲ್ಲಾ ಕೇಳುತ್ತಿದ್ದಾರೆ.

"ಏನೂ ಇಲ್ಲವಲ್ಲಾ ಎಂದು ಸೌಮ್ಯವಾಗಿಯೇ ಹೇಳಿದೆ. ಆದರೆ ನೋಡಿ, ಆ ದಿನವೇ ಶಿವನಸಮುದ್ರದಲ್ಲಿ ಸಿಡಿಲುಹೊಡೆದು ಎಲೆಕ್ಟ್ರಿಕ್ ಜನರೇಟಿಂಗ್ ಸ್ಟೇಷನ್ನೇ ಉರಿದುಬಿದ್ದುದು ಈವತ್ತಿಗೂ ಯಾರು ಏನೇ ಹೇಳಲಿ ಶೀಲು ಮನಸ್ಸಿನಲ್ಲಿ ನಾನು ಸ್ವಿಚ್ ರಿಪೇರಿ ಮಾಡಿದ ಪ್ರಯುಕ್ತ, Short circuit Sivana ಸಮುದ್ರಕ್ಕೆ ಹೊಡೆದು ಹೀಗಾಯಿತು ಎಂದೇ ನಂಬಿಕೆ!

ಏನಾಗಿತ್ತು ಅಂತೀರಿ! ಆ ಮೇಲೆ ತಿಳಿಯಿತು! ಸಂಬಂಧ ಬಿಟ್ಟ ಎರಡು ತಂತಿಗಳನ್ನು ತಾಮ್ರದ ತಂತಿಯಿಂದ ಕೂಡಿಸಿದ್ದೆ! ಅದೇ ಕೆಲಸವನ್ನೇ ಇಲಾಖೆಯ ನೌಕರನು ನಮ್ಮ ಮನೆಯ ಕಂಬಕ್ಕೂ ಮಾಡಿದ್ದನಂತೆ. ಕಾರಣ, ರಸ್ತೆಯ ಕೊನೆಯ transformer ನಮ್ಮ ಚೂಟಿಯನ್ನು ತಾಳಲಾರದೆ ಢಮಾರ್ ಎಂದು ಹೊಟ್ಟೆ ಬಿರಿದು ಕಾಲವಾಗಿ, ಬೆಂಕಿಬಿದ್ದು ಹೋಗಿತ್ತು!

—ಪ್ರಕಾಶ್.

ಶೀಘ್ರದಲ್ಲಿಯೇ ಪ್ರದರ್ಶನಕ್ಕೆ ಬರುತ್ತದೆ!

ಬೆಂಗಳೂರು: ಸ್ಟೇಟ್ಸ್ — ಶ್ರೀ

ಮೈಸೂರು: ಚಾಮುಂಡೇಶ್ವರಿ

ಮತ್ತು ಸಂಸ್ಥಾನದ ಇತರ ಪ್ರಮುಖ ಕೇಂದ್ರಗಳಲ್ಲಿ



ಭಾನುಮತಿ - ಎಂ ಎನ್. ರಾಜಂ - ವಿದ್ಯಾವತಿ - ಎಂ. ಜಿ. ರಾಮಚಂದ್ರನ್

ಸಾರಂಗಪಾಣಿ - ವೀರಪ್ಪ - ತಂಗವೇಲು ಇವರ ಉತ್ತಮ ಅಭಿನಯ

ನೃತ್ಯಗಳು:—ವಹೀದಾ ಮತ್ತು ಸಾಯಿಸುಬ್ಬುಲಕ್ಷ್ಮಿ.

SRI RAGHAVENDRA RELEASE

Printed by B. S. Iyengar, Bangalore City.

Publisher—B. N. Gupta. Editor—M. Sivaram.